# ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ : 21.02.2024 ರಂದು ಗುರುವಾರ ಬೆಳಿಗ್ಗೆ 11.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಛೇರಿಯಲ್ಲಿ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳು.

## ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

1. ಪ್ರೊ.ಹರೀಶ್ ರಾಮಸ್ವಾಮಿ, ಮಾನ್ಯ ಕುಲಪತಿಗಳು — ಅಧ್ಯಕ್ಷರು
2. ಶ್ರೀ.ಶಿವಬಸಪ್ಪ ಮಾಲಿ ಪಾಟೀಲ್ — ಸಿಂಡಿಕೇಟ್ ಸದಸ್ಯರು
3. ಶ್ರೀ.ನಾಗೇಂದ್ರ ಪ್ರಸಾದ ಎ.ಎಂ. — ಸಿಂಡಿಕೇಟ್ ಸದಸ್ಯರು (ಆನ್ ಲೈನ್ ಮುಖಾಂತರ)
4. ಪ್ರೊ.ಪಾರ್ವತಿ ಸಿ.ಎಸ್. — ಸಿಂಡಿಕೇಟ್ ಸದಸ್ಯರು
5. ಪ್ರೊ.ಎಂ.ಯರಿಸ್ವಾಮಿ, ಕುಲಸಚಿವರು (ಮೌಲ್ಯಮಾಪನ) — ಸದಸ್ಯರು
6. ಪ್ರೊ.ವಿಶ್ವನಾಥ ಎಂ., ಕುಲಸಚಿವರು — ಸದಸ್ಯ ಕಾರ್ಯದರ್ಶಿಗಳು

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ಸಿಂಡಿಕೇಟ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಐಟ ಂ.ನ ಂ | ವಿಷಯ | ನಿರ್ಣಯಗಳು |
|---|---|---|
| 1. | ದಿನಾಂಕ 28.12.2023 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು. | ದಿನಾಂಕ 28.12.2023 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳನ್ನು ಕುಲಸಚಿವರು ಸಭೆಯಲ್ಲಿ ವಿವರವಾಗಿ ಮಂಡಿಸಿದರು, ಈ ನಡವಳಿಗಳನ್ನು ಸಭೆಯಲ್ಲಿ ದೃಢೀಕರಿಸಲಾಯಿತು. |
| 2. | ರಾಯಚೂರು ವಿಶ್ವವಿದ್ಯಾಲಯದಲ್ಲಿ ವಿವಿಧ ಮಹನೀಯರಾದ ಡಾ.ಬಿ.ಆರ್.ಅಂಬೇಡ್ಕರ್, ಡಾ.ಬಾಬು ಜಗಜೀವನ ರಾಮ್, ಮಹರ್ಷಿ ವಾಲ್ಮೀಕಿ, ದಾಸ ಸಾಹಿತ್ಯ, ಜಗಜ್ಯೋತಿ ಬಸವೇಶ್ವರ ಹಾಗೂ ಡಾ. ರಾಜಕುಮಾರ ಅವರುಗಳ ಜೀವನ, ಸಾಧನೆ ಹಾಗೂ ಚಿಂತನೆಗಳ ಕುರಿತು ಅಧ್ಯಯನ ಮಾಡಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ರಚಿಸಿದ ಪ್ರೊ. ಅನಂತರಾಮಯ್ಯ ಅವರ ವರದಿಯ ಅನುಸಾರವಾಗಿ ವಿಶ್ವವಿದ್ಯಾಲಯದಲ್ಲಿ ವಿವಿಧ ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಕುರಿತು. | ಮಾನ್ಯ ಕುಲಪತಿಗಳು ವಿವಿಧ ಅಧ್ಯಯನ ಪೀಠಗಳಾದ ಡಾ.ಬಿ.ಆರ್.ಅಂಬೇಡ್ಕರ್, ಡಾ.ಬಾಬು ಜಗಜೀವನ ರಾಮ್, ಮಹರ್ಷಿ ವಾಲ್ಮೀಕಿ, ದಾಸ ಸಾಹಿತ್ಯ, ಜಗಜ್ಯೋತಿ ಬಸವೇಶ್ವರ ಹಾಗೂ ಡಾ. ರಾಜಕುಮಾರ ಅವರುಗಳ ಜೀವನ, ಸಾಧನೆ ಹಾಗೂ ಚಿಂತನೆಗಳ ಕುರಿತು ಅಧ್ಯಯನ ಪ್ರಮುಖ್ಯತೆ ಬಗ್ಗೆ ಸಿಂಡಿಕೇಟ್ ಸಭೆಯಲ್ಲಿ ಕುಲಂಕೂಷವಾಗಿ ವಿವರ ನೀಡಿ ಸರ್ಕಾರವು ಇಂತಹ ಅಧ್ಯಯನ ಪೀಠಗಳನ್ನು ನಡೆಸಲು ಹಾಕಿಕೊಟ್ಟ ಮಾರ್ಗಸೂಚಿ ಹಾಗೂ ಪ್ರೊ. ಅನಂತರಾಮಯ್ಯ ಅವರ ವರದಿಯ ಅಂಶಗಳನ್ನು ವಿಸ್ತಾರವಾಗಿ ಸಭೆಗೆ ತಿಳಿಸಿದರು. ಸಿಂಡಿಕೇಟ್ ಸದಸ್ಯರ ಒಪ್ಪಿಗೆ ಮೇರೆಗೆ ಈ ಅಧ್ಯಯನ ಪೀಠಗಳನ್ನು ರಾಯಚೂರು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಸಭೆಯಲ್ಲಿ ಚರ್ಚಿಸಿ, ಒಪ್ಪಿಗೆಯನ್ನು ಪಡೆದು ಈ ಅಧ್ಯಯನ ಪೀಠಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸಲು ತೀರ್ಮಾನಿಸಿ, ಅನುಮೋದಿಸಲಾಯಿತು. |
| 3. | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಹಾಗೂ ಕಾರ್ಡಿಪ್ ಮೆಟ್ರೊಪಾಲಿಟನ್ ವಿಶ್ವವಿದ್ಯಾಲಯ, ವೇಲ್ಸ್ (ಯುನೈಟೆಡ್ ಕಿಂಗಡಮ್) ಇವುಗಳ ನಡುವಿನ | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಮತ್ತು ಕರ್ನಾಟಕ ರಾಜ್ಯ ಸರ್ಕಾರ ಹಾಗೂ ಬ್ರಿಟಿಷ್ ಕೌನ್ಸಿಲ್ ಸೇರಿದಂತೆ ಮಾಡಿಕೊಂಡ ಒಡಂಬಡಿಕೆಯ ಪ್ರಕಾರ |

| | | |
|---|---|---|
| | ಒಡಂಬಡಿಕೆಯಂತೆ ರಾಯಚೂರು ವಿಶ್ವವಿದ್ಯಾಲಯದಲ್ಲಿ ದಿನಾಂಕ 26.03.2024 ರಿಂದ 31.03.2024 ರ ವರೆಗೆ 05 ದಿನಗಳ ಕಾಲ "ಕೃತಕ ಬುದ್ಧಿಮತ್ತೆ (Artificial Intelligence)" ಕಾರ್ಯಾಗಾರವನ್ನು ಪದವಿ & ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಹಾಗೂ ಕಾಲೇಜು ಹಾಗೂ ವಿಶ್ವವಿದ್ಯಾಲಯದ ಉಪನ್ಯಾಸಕರಿಗೆ ಆಯೋಜಿಸುವ ಕುರಿತು ಹಾಗೂ ಅದಕ್ಕೆ ಸಂಬಂಧಿಸಿದ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಟೆಂಡರ್ ಕರೆಯಲಾಗಿದೆ ಅದನ್ನು ಸಿಂಡಿಕೇಟ್‌ನಲ್ಲಿ ಅನುಸಮರ್ತಿಸುವ (Ratification) ಕುರಿತು. | ಸಾರ್ವಜನಿಕ ವಲಯಗಳ ನಾಯಕತ್ವ ಕಾರ್ಯಕ್ರಮದಡಿ ರಾಯಚೂರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಬ್ರಿಟನ್ ಮತ್ತು ಯುಕೆಗೆ ಕರ್ನಾಟಕ ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಪತಿಗಳ ಡೆಲಿಗೇಷನ್‌ನಲ್ಲಿ ಹೋಗಿ ಬಂದ ನಂತರ ಅಲ್ಲಿನ ವಿಶ್ವವಿದ್ಯಾಲಯಗಳಲ್ಲಿರುವ ಶೈಕ್ಷಣಿಕ ಸೌಕರ್ಯಗಳ ಕುರಿತು ರಾಯಚೂರು ವಿಶ್ವವಿದ್ಯಾಲಯದ ಆಸಕ್ತಿಗಳನ್ನು ಕುರಿತು ಪ್ರಸ್ತುತಪಡಿಸಿದ್ದರು. ಈ ಹಿನ್ನಲೆಯಲ್ಲಿ ಕರ್ನಾಟಕ-ವೇಲ್ಸ್ ವಿಶ್ವವಿದ್ಯಾಲಯಗಳ ಒಡಂಬಡಿಕೆ ಯೋಜನೆಗಳ ಅಡಿಯಲ್ಲಿ ಕಾರ್ಡಿಫ್ ಮೇಟ್ರೋ ಪಾಲಿಟನ್ ವಿಶ್ವವಿದ್ಯಾಲಯ ಜೊತೆಗೆ ನಮ್ಮ ವಿಶ್ವವಿದ್ಯಾಲಯ ಸಹಯೋಗ ಹೊಂದಿದೆ ಸಂಯುಕ್ತಾಶ್ರಯದಲ್ಲಿ ಜರುಗುವ ಒಡಂಬಡಿಕೆಯ ಕಾರ್ಯಗಾರವನ್ನು ದಿನಾಂಕ 26.03.2024 ರಿಂದ 30.03.2024 ರವರೆಗೆ 05 ದಿನಗಳ ಕಾಲ ಕೃತಕ ಬುದ್ಧಿಮತ್ತೆ (Artificial Intelligence) ಕಾರ್ಯಗಾರವನ್ನು ನಡೆಸಲು ವಿಶ್ವವಿದ್ಯಾಲಯದ ಗ್ರಂಥಾಲಯದ ನೆಲ ಮಹಡಿಯಲ್ಲಿ ಇಗಿರುವ ಕಂಪ್ಯೂಟರ್ ಕೇಂದ್ರವನ್ನು ಆಧುನೀಕರಣಗೊಳಿಸಲು, ಅವಶ್ಯಕತೆವಿರುವ ಎಲೆಕ್ಟ್ರಿಕಲ್ ಕೆಲಸಗಳನ್ನು, ಪೇಂಟಿಂಗ್, ಲ್ಯಾನ್, ಇಂಟರ್‌ನೆಟ್ ಸೌಲಭ್ಯ, ಆಡಿಯೋ/ವಿಡಿಯೋ ಇಕ್ಯೂಪ್‌ಮೆಂಟ್ಸ್ Carpenting, ಪ್ರೋಜೆಕ್ಟರ್, ಸ್ಕ್ರೀನ್ ಈ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಟೆಂಡರ್ ಕರೆಯಲಾಗಿದ್ದು, ಅಂದಾಜು ಸುಮಾರು 25 ಲಕ್ಷ ರೂಗಳಾಗಿರುತ್ತದೆ. ಈ ಡಿಪಿಆರ್ ಪರಿಶೀಲಿಸಿ ಸಭೆಯು ಟೆಂಡರ್‌ನ್ನು ಅನುಸಮರ್ಥಿಸಿ, ಅನುಮೋದಿಸಿತು. |
| 4. | ರಾಯಚೂರು ವಿಶ್ವವಿದ್ಯಾಲಯದಲ್ಲಿ ದಿನಾಂಕ 28 ಮತ್ತು 29 ಫೆಬ್ರುವರಿ, 2024 ರಂದು "Multi Disciplinary Research Prospects and Challenges" ಎಂಬ ವಿಷಯದ ಕುರಿತು ಎರಡು ದಿನಗಳ ರಾಷ್ಟ್ರೀಯ ವಿಜ್ಞಾನ ಸಮ್ಮೇಳನವನ್ನು (National Science Conference) ಆಯೋಜಿಸುವ ಕುರಿತು ಹಾಗೂ ಅದಕ್ಕೆ ತಗಲುವ ಆರ್ಥಿಕ ವೆಚ್ಚವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸುವ ಕುರಿತು ಚರ್ಚೆ. | ಕುಲಪತಿಗಳು ವಿಶ್ವವಿದ್ಯಾಲಯದಲ್ಲಿ ದಿನಾಂಕ 28 ಮತ್ತು 29 ಫೆಬ್ರುವರಿ, 2024 ರಂದು 9 ವಿಜ್ಞಾನ ವಿಭಾಗಗಳು ಜಂಟಿಯಾಗಿ "Multi Disciplinary Research Prospects and Challenges" ಎಂಬ ವಿಷಯದ ಕುರಿತು ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು (National Science Conference) ಆಯೋಜಿಸಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು. ರಾಷ್ಟ್ರೀಯ ಮಟ್ಟದ ಈ ಸಮ್ಮೇಳನಕ್ಕೆ ಬೇರೆ ಬೇರೆ ರಾಜ್ಯಗಳಿಂದ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಲಾಗಿದ್ದು ಹಾಗೂ ಸ್ಟಾರ್ ಸ್ಪೀಕರ್ಸ್ ಎಂದು ವಿಜ್ಞಾನ ಕೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿರುವಂತಹ ಪ್ರೋಫೆಸರ್ಸ್‌ಗಳಿಗೆ ಆಹ್ವಾನ ನೀಡಲಾಗಿದೆ ಎಂದು ತಿಳಿಸಿದರು.<br>ಇದರಲ್ಲಿ ಪ್ರಮುಖರಾಗಿ,<br>1.ಎಸ್.ಕೆ.ಸೈದಾಪೂರ ಮಾಜಿ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ,<br>2.ಬಿ.ಜಿ.ಮೂಲಿಮನಿ ಮಾಜಿ ಕುಲಪತಿಗಳು, ಗುಲ್ಬರ್ಗಾ ವಿಶ್ವವಿದ್ಯಾಲಯ ಕಲಬುರಗಿ,<br>3.ದಯಾನಂದ ಅಗ್ಸರ ಕುಲಪತಿಗಳು, ಗುಲ್ಬರ್ಗಾ ವಿಶ್ವವಿದ್ಯಾಲಯ ಕಲಬುರಗಿ,<br>ಇವರುಗಳನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ ಎಂದು |

| | | |
|---|---|---|
| | | ತಿಳಿಸುತ್ತ, ಸಮ್ಮೇಳನ ಸಂಚಾಲಕರಾದ ಪ್ರೊ.ಭಾಸ್ಕರ್ ಇವರು ಸಮ್ಮೇಳನಕ್ಕೆ ತಗಲುವ ವೆಚ್ಚವನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗಿದ್ದು, ಸಮ್ಮೇಳನದ ವೆಚ್ಚದ ಪಟ್ಟಿಯನ್ನು ನೀಡಿರುತ್ತದೆ. ಈ ಸಮ್ಮೇಳನಕ್ಕೆ ಸುಮಾರು 5 ಲಕ್ಷರೂಗಳು ಎಂದು ಅಂದಾಜಿಸಲಾಗಿದ್ದು, ಸಮ್ಮೇಳನಕ್ಕೆ ಅತಿಥಿಗಳು, ವಿದ್ಯಾರ್ಥಿಗಳು, ಉಪನ್ಯಾಸಕರು, ವ್ಯಾಲೆಂಟರ್ಸ್ ಇವರುಗಳಿಗೆ ಎರಡು ದಿನದ ಉಪಹಾರ, ಊಟದ ವ್ಯವಸ್ಥೆಯನ್ನು ಹಾಗೂ ಅತಿಥಿಗಳಿಗೆ ವಸತಿ ವ್ಯವಸ್ಥೆ, ಪ್ರಯಾಣ ಭತ್ಯೆ/ಟ್ಯಾಕ್ಸಿ ಚಾರ್ಜಸ್, ಫ್ಲೈಟ್ ಚಾರ್ಜಸ್ ಹಾಗೂ ಇನ್ನೂಳಿದ ಅವಶ್ಯಕತೆ ಇರುವ ಹಾಗೂ ಕಾರ್ಯಕ್ರಮಕ್ಕೆ ಬೇಕಾಗುವ ಸೌಲಭ್ಯಗಳನ್ನು ಕಲ್ಪಿಸಲು ಅಂದಾಜನ್ನು ನೀಡಿತ್ತಾರೆ. ಇದರ ಬಗ್ಗೆ ಸಭೆಯಲ್ಲಿ ಕುಲಂಕೂಷವಾಗಿ ಚರ್ಚಿಸಿ ಈ 2 ದಿನಗಳ ಸಮ್ಮೇಳನಕ್ಕೆ ತಗಲುವ ವೆಚ್ಚವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸಲು ಒಪ್ಪಿಗೆ ಸೂಚಿಸಿ, ಅನುಮೋದಿಸಲಾಯಿತು. |
| 5. | ರಾಯಚೂರು ವಿಶ್ವವಿದ್ಯಾಲಯದಲ್ಲಿ ದಿನಾಂಕ 27 ಮತ್ತು 28 ಮಾರ್ಚ,2024 ರಂದು "Social Movement in India" ಎಂಬ ವಿಷಯದ ಕುರಿತು ಎರಡು ದಿನಗಳ ರಾಷ್ಟ್ರೀಯ ಸಮಾಜ ವಿಜ್ಞಾನಗಳ ವಿಚಾರ ಸಂಕಿರಣ (National Social Seminar) ವನ್ನು ಆಯೋಜಿಸುವ ಕುರಿತು ಹಾಗೂ ಅದಕ್ಕೆ ತಗಲುವ ಆರ್ಥಿಕ ವೆಚ್ಚವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸುವ ಕುರಿತು ಚರ್ಚೆ. | ಕುಲಪತಿಗಳು ವಿಶ್ವವಿದ್ಯಾಲಯದಲ್ಲಿ ದಿನಾಂಕ 27 ಮತ್ತು 28 ಮಾರ್ಚ 2024ರಂದು ಸಮಾಜ ವಿಜ್ಞಾನ ವಿಭಾಗಗಳು "Social Movement in India" ಎಂಬ ವಿಷಯದ ಕುರಿತು ಎರಡು ದಿನಗಳ ರಾಷ್ಟ್ರೀಯ ಸಮಾಜ ವಿಜ್ಞಾನ ವಿಚಾರ ಸಂಕಿರಣ (National Social Seminar) ವನ್ನು ಆಯೋಜಿಸುವ ಕುರಿತು ವಿಚಾರ ಸಂಕಿರಣದ ಸಂಚಾಲಕರಾದ ಪ್ರೊ.ಯರಿಸ್ವಾಮಿ ಎಂ. ಸಭೆಯಲ್ಲಿ ತಿಳಿಸಿದರು. ರಾಷ್ಟ್ರೀಯ ಮಟ್ಟದ ಈ ವಿಚಾರ ಸಂಕಿರಣಕ್ಕೆ ಬೇರೆ ಬೇರೆ ರಾಜ್ಯಗಳಿಂದ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಲಾಗಿದ್ದು, ಸಮಾಜ ವಿಜ್ಞಾನ ಕೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿರುವಂತಹ ಪ್ರೋಫೆಸರ್ಸ್‌ಗಳಿಗೆ ಆಹ್ವಾನ ನೀಡಲಾಗಿದೆ ಎಂದು ತಿಳಿಸಿದರು. ವಿಚಾರ ಸಂಕಿರಣ ಸಂಚಾಲಕರಾದ ಪ್ರೊ.ಯರಿಸ್ವಾಮಿ ಎಂ. ಇವರು ವಿಚಾರ ಸಂಕಿರಣಕ್ಕೆ ಸುಮಾರು 5 ಲಕ್ಷರೂಗಳ ಅಂದಾಜು ವೆಚ್ಚದ ಪಟ್ಟಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗಿದ್ದು, ವಿಚಾರ ಸಂಕಿರಣಕ್ಕೆ ಅತಿಥಿಗಳು, ವಿದ್ಯಾರ್ಥಿಗಳು, ಉಪನ್ಯಾಸಕರು, ವ್ಯಾಲೆಂಟರ್ಸ್ ಇವರುಗಳಿಗೆ ಎರಡು ದಿನದ ಉಪಹಾರ, ಊಟದ ವ್ಯವಸ್ಥೆ ಹಾಗೂ ಅತಿಥಿಗಳಿಗೆ ವಸತಿ ವ್ಯವಸ್ಥೆ, ಪ್ರಯಾಣ ಭತ್ಯೆ/ಟ್ಯಾಕ್ಸಿ ಚಾರ್ಜಸ್, ಫ್ಲೈಟ್ ಚಾರ್ಜಸ್ ಹಾಗೂ ಇನ್ನೂಳಿದ ಅವಶ್ಯಕತೆ ಇರುವ ಹಾಗೂ ಕಾರ್ಯಕ್ರಮಕ್ಕೆ ಬೇಕಾಗುವ ಸೌಲಭ್ಯಗಳನ್ನು ಕಲ್ಪಿಸುವ ಅಂದಾಜನ್ನು ನೀಡಿರುತ್ತಾರೆ. ಇದರ ಬಗ್ಗೆ ಸಭೆಯಲ್ಲಿ ಕುಲಂಕೂಷವಾಗಿ ಚರ್ಚಿಸಿ ಈ 2 ದಿನಗಳ ವಿಚಾರ ಸಂಕಿರಣಕ್ಕೆ ತಗಲುವ ವೆಚ್ಚವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸಲು ಒಪ್ಪಿಗೆ ಸೂಚಿಸಿ, ಅನುಮೋದಿಸಲಾಯಿತು. |

| | | |
|---|---|---|
| 6. | ರಾಯಚೂರು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗಾಗಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಾದ ಯು.ಪಿ.ಎಸ್.ಸಿ/ಕೆ.ಪಿ.ಎಸ್ಸಿ/ಯು.ಜಿ.ಸಿನೆಟ್/ಕೆ.ಸೆಟ್/ಬ್ಯಾಂಕಿಂಗ್/ಪಿ.ಎಸ್.ಆಯ್/ರೈಲ್ವೆ/ಎಸ್.ಡಿ.ಎ/ಎಫ್.ಡಿ.ಎ/ಎಸ್.ಎಸ್.ಸಿ/ಸಿ.ಗ್ರುಪ್ ಹಾಗೂ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ನೀಡಲು ವಿಶ್ವವಿದ್ಯಾಲಯದಲ್ಲಿ ಒಂದು ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವನ್ನು ಸ್ಥಾಪಿಸುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗಾಗಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ನೀಡಲು ವಿಶ್ವವಿದ್ಯಾಯದಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರವನ್ನು ಸ್ಥಾಪಿಸುವ ಸಂಬಂಧ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಕುಲಸಚಿವರು ರಾಯಚೂರು ವಿಶ್ವವಿದ್ಯಾಲಯದಲ್ಲಿ ಸ್ಕಿಲ್ ಸೆಂಟರ್ ಸ್ಥಾಪಿಸಲು ನಿಯಮಾವಳಿಗಳನ್ನು ರಚಿಸಿ, ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.<br><br>ಈ ನಿಯಮಾವಳಿಗಳು ಸರ್ಕಾರದಿಂದ ಒಪ್ಪಿಗೆಗೊಂಡು ಬಂದ ನಂತರ ಎಲ್ಲಾ ತರಬೇತಿಯನ್ನು ಸ್ಕಿಲ್ ಸೆಂಟರ್ ಮುಖಾಂತರ ಮಾಡಲು ನಿಯಮಾವಳಿಗಳಲ್ಲಿ ಅವಕಾಶವಿದ್ದು, ಈ ಮುಖಾಂತರ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿ ಕೊಡಬಹುದೆಂದು ತಿಳಿಸದರು.<br><br>ಮುಂದುವರೆದು, ಈ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲವನ್ನು ವ್ಯಯ ಮಾಡಬಾರದು ಎಂದು ಸಭೆಯು ನಿರ್ಧರಿಸಿ, ವಿಶ್ವವಿದ್ಯಾಲಯಕ್ಕೆ CSR Grants, SCP (Scheduld Cast Plan) TSP(Tribal sub plan), KSDC (Karnataka Skill Development Corporation) ನಿಂದ ಬರುವಂತಹ ಹಣದಿಂದ ಅಥವಾ ಬಾಹ್ಯ ಏಜೆನ್ಸಿಗಳಿಂದ ಬರುವಂತಹ ಹಣದಿಂದ ಈ ತರಬೇತಿಗಳನ್ನು ಹಮ್ಮಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಿ ಹಾಗೂ ಸ್ಕಿಲ್ ಸೆಂಟರ್ ಮುಖಾಂತರ ಮಾತ್ರ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಸಭೆಯಲ್ಲಿ ನಿರ್ಧರಿಸಿ ಅನುಮೋದಿಸಲಾಯಿತು. |
| 7. | ರಾಯಚೂರು ವಿಶ್ವವಿದ್ಯಾಲಯದಲ್ಲಿ ಮುಂದಿನ ತಿಂಗಳ 14 ಮತ್ತು 15 ಮಾರ್ಚ–2024 ರಂದು ಅಂತರ ಕಾಲೇಜುಗಳ ಯುವಜನೋತ್ಸವವನ್ನು ಆಯೋಜಿಸುವ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯ ಸ್ಥಾಪನೆಗೊಂಡ ನಂತರ, 2023–24ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಯುವಜನೋತ್ಸವ ಕಾರ್ಯಕ್ರಮವನ್ನು ಆಯೋಜಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಶ್ರೀ.ಶಿವಬಸಪ್ಪ ಮಾಲಿ ಪಾಟೀಲ್ ಸಿಂಡಿಕೇಟ್ ಸದಸ್ಯರು, ಇವರು ಯುವಜನೋತ್ಸವವನ್ನು ಅತ್ಯಂತ ಅಚ್ಚುಕಟ್ಟಾಗಿ ಆಯೋಜಿಸಲು ಎಲ್ಲಾ ಕಾಲೇಜುಗಳ ಪ್ರಾಚಾರ್ಯರ ಸಭೆ ಕರೆದು ಅವರಿಗೆ ಜವಾಬ್ದಾರಿಯನ್ನು ನೀಡಿ ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ನೆರವೇರಿಸಲು ತಿಳಿಸಿದರು.<br><br>ಮುಂದುವರೆದು, ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಂದ, ವಿದ್ಯಾರ್ಥಿ ಚಟುವಟಿಕೆಗಳಿಗೆ ಭರಿಸಿರುವ ಶುಲ್ಕದಿಂದ ಸಂಗ್ರಹವಾದ ಹಣದಿಂದ ಈ ಕಾರ್ಯಕ್ರಮವನ್ನು ಆಯೋಜಿಸಬೇಕು ಹಾಗೂ ಈ ಕಾರ್ಯಕ್ರಮಕ್ಕೆ ಸುಮಾರು 2 ಸಾವಿರ ವಿದ್ಯಾರ್ಥಿಗಳು ಪಾಲ್ಗೊಳ್ಳುವ ಸಂಭವವಿದ್ದು, ಈ 2–3 ದಿನದ ಕಾರ್ಯಕ್ರಮಕ್ಕೆ ಅಂದಾಜು 18 ರಿಂದ 20 ಲಕ್ಷರೂಗಳು ವೆಚ್ಚವಾಗಬಹುದೆಂದು ಸಭೆಗೆ ಕುಲಸಚಿವರು ತಿಳಿಸಿದರು. ಇದರ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, |

| | | |
|---|---|---|
| | | ಯುವಜನೋತ್ಸವಕ್ಕೆ ವ್ಯಯವಾಗುವ ವೆಚ್ಚವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ನಿಯಮನುಸಾರ ಭರಿಸಲು ತೀರ್ಮಾನಿಸಿ, ಅನುಮೋದಿಸಲಾಯಿತು. |
| 8. | ವಿಶ್ವವಿದ್ಯಾಲಯದಲ್ಲಿ ಇಂಜಿನಿಯರಿಂಗ್ ಮತ್ತು ಕಟ್ಟಡ ನಿರ್ಮಾಣದ ವಿಭಾಗದಲ್ಲಿ ಗುತ್ತಿಗೆ ಆಧಾರದ ಮೇಲೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ. ಪಂಪಾಪತಿ ಬಡಿಗೇರ್ ಅವರ ಗುತ್ತಿಗೆ ಅವಧಿಯು ಜನವರಿ–2024 ರಲ್ಲಿ ಮುಕ್ತಾಯವಾಗಿದ್ದು, ಅವರ ಗುತ್ತಿಗೆ ಅವಧಿಯನ್ನು ಮುಂದುವರೆಸುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ಮತ್ತು ಕಟ್ಟಡ ನಿರ್ಮಾಣದ ವಿಭಾಗದಲ್ಲಿ ಗುತ್ತಿಗೆ ಆಧಾರದ ಮೇಲೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ. ಪಂಪಾಪತಿ ಬಡಿಗೇರ್ ಇವರ ಕರ್ತವ್ಯದ ಅವಧಿ ಜನವರಿ–2024ರಂದು ಮುಗಿದಿರುವುದರಿಂದ ಸದರಿ ಅವರ ಸೇವೆಯನ್ನು 11 ತಿಂಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಿ, ಸದರಿಯವರಿಗೆ ಪ್ರತಿ ತಿಂಗಳಿಗೆ 50 ಸಾವಿರ ರೂಗಳ ಸಂಚಿತ ವೇತನ ನೀಡಿ, ಅವರನ್ನು ಮುಂದುವರೆಸಲು ಸಭೆಯು ಒಪ್ಪಿಗೆ ಸೂಚಿಸಿ, ಅನುಮೋದಿಸಿತು. |
| 9. | ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕವಾಗಿ ಸಂಚಿತ ವೇತನದ ಮೇಲೆ ಕಾರ್ಯ ನಿರ್ವಹಿಸುತ್ತಿರುವ 04 ಜನ UUCMS Technical Officers ಗಳ 11 ತಿಂಗಳ ನೇಮಕಾತಿ ಅವಧಿಯು ದಿನಾಂಕ 23.02.2024 ರಂದು ಮುಗಿಯುತ್ತಲಿದ್ದು, ಸದರಿ 04 ಜನ ಸಿಬ್ಬಂದಿಗಳನ್ನು ಮುಂದುವರೆಸುವ ಕುರಿತು. | ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕವಾಗಿ ಸಂಚಿತ ವೇತನದ ಮೇಲೆ ಕಾರ್ಯ ನಿರ್ವಹಿಸುತ್ತಿರುವ 04 ಜನ UUCMS Technical Officers ಗಳ 11 ತಿಂಗಳ ನೇಮಕಾತಿ ಅವಧಿಯು ದಿನಾಂಕ 23.02.2024 ರಂದು ಮುಗಿಯುತ್ತಲಿದ್ದು, ಸದರಿ 04 ಜನ ಸಿಬ್ಬಂದಿಗಳ ಸೇವೆಯನ್ನು 11 ತಿಂಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಿ, ಸದರಿಯವರಿಗೆ ಪ್ರತಿ ತಿಂಗಳಿಗೆ 40 ಸಾವಿರ ರೂಗಳ ಸಂಚಿತ ವೇತನ ನೀಡಿ, ಅವರನ್ನು ಮುಂದುವರೆಸಲು ಸಭೆಯು ಒಪ್ಪಿಗೆ ಸೂಚಿಸಿ, ಅನುಮೋದಿಸಿತು. |
| 10 | 2022–23 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ವತಿಯಿಂದ ಮೆಗಾ–ಜಿ.ಡಿ.ಕ್ಯೂ ಅಡಿಯಲ್ಲಿ ಮಂಜೂರಾತಿ ನೀಡಿದ ಅನುದಾನವನ್ನು ಬಳಕೆ ಮಾಡುವ (Funds Utilization) ಕುರಿತು ಚರ್ಚೆ. | |

ಕುಲಸಚಿವರು, ಕೆಕೆಆರ್‌ಡಿಬಿ ವತಿಯಿಂದ ಮಂಜೂರಾದ ಅನುದಾನದ ಬಗ್ಗೆ ಸಭೆಗೆ ಈ ಕೆಳಗಿನಂತೆ ಮಂಡಿಸಿದರು.

1. ಸರ್ಕಾರವು ದಿನಾಂಕ 22.08.2022ರಂದು ರಾಯಚೂರು ವಿಶ್ವವಿದ್ಯಾಲಯಕ್ಕೆ 9.85 ಕೋಟಿರೂಗಳನ್ನು ಸರ್ಕಾರ ಮ್ಯಾಕ್ರೋ ವಿವೇಚನಾ ಕೋಟಾದ ಅಡಿಯಲ್ಲಿ (ಜಿ.ಡಿ.ಕ್ಯೂವನ್ನು) ಕೆಕೆಆರ್‌ಡಿಬಿ ಮುಖಾಂತರ ಮಂಜೂರು ಮಾಡಿ. ಈ ಅನುದಾನವನ್ನು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಪಿಠೋಪಕರಣಗಳ ಹಾಗೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು, ವಿಶ್ವವಿದ್ಯಾಲಯಕ್ಕೆ ಅವಶ್ಯಕತೆ ಇರುವ ಸಿಸಿಟಿವಿ ಹಾಗೂ ಸ್ಮಾರ್ಟ ಕ್ಲಾಸ್ ರೂಮ್, ಸೋಲಾರ್ ಲೈಟಿಂಗ್ ಬಳಸಲು ಆದೇಶಿಸಲಾಗಿರುತ್ತದೆ.
2. ಕೆಕೆಆರ್‌ಡಿಬಿ ಮಂಡಳಿ ವತಿಯಿಂದ ರಾಯಚೂರು ವಿಶ್ವವಿದ್ಯಾಲಯಕ್ಕೆ Advanced Artificial Intelligence Center of Excellence ಸ್ಥಾಪಿಸಲು 9,23,60,000 (ಒಂಭತ್ತು ಕೋಟಿ ಇಪ್ಪತ್ತು ಮೂರು ಲಕ್ಷದ ಅರವತ್ತು ಸಾವಿರ) ರೂ ಗಳು ರಾಯಚೂರು ವಿಶ್ವವಿದ್ಯಾಲಯಕ್ಕೆ ಕೆಕೆಆರ್‌ಡಿಬಿ RF ರೀಜನಲ್ ಫಂಡ್‌ನಿಂದ ಮಂಜೂರಾತಿಯಾಗಿರುತ್ತದೆ
3. ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರಾದ ಶ್ರೀ ಬಸನಗೌಡ ದದ್ದಲ್‌ರವರ ಕ್ಷೇತ್ರದ ಅನುದಾನದಲ್ಲಿ ಕೆಕೆಆರ್‌ಡಿಬಿ ಮೈಕ್ರೋ ಪ್ರೊಜೆಕ್ಟ ಮುಖಾಂತರ 1 ಕೋಟಿ ರೂಗಳು ವಿಶ್ವವಿದ್ಯಾಲಯದಲ್ಲಿ 8 ತರಗತಿ ಕಟ್ಟಡಗಳನ್ನು ನಿರ್ಮಾಣ ಮಾಡಲು ಅನುಮೋದನೆಗೊಂಡಿರುತ್ತದೆ. ಈ ಅನುಮೋದನೆಗೊಂಡ ಮೈಕ್ರೋ ಕಾಮಗಾರಿಯನ್ನು ಪಿಡಬ್ಲೂಡಿ ಮುಖಾಂತರ ನೇರವೇರಿಸಲು ಜಿಲ್ಲಾಧಿಕಾರಿಗಳು ಆದೇಶಿಸಿರುತ್ತಾರೆ. ಹೀಗೆ ಒಟ್ಟು ಕೆಕೆಆರ್‌ಡಿಬಿ ಇಂದ ರಾಯಚೂರು ವಿಶ್ವವಿದ್ಯಾಲಯ ರಾಯಚೂರುಗೆ 20,08,60,000/- ಮಂಜೂರಾಗಿರುತ್ತದೆ.

ರಾಯಚೂರು ವಿಶ್ವವಿದ್ಯಾಲಯಕ್ಕೆ ಅನುಮೋದನೆಗೊಂಡ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ನಿಯಮಾನುಸಾರ ವಿಶ್ವವಿದ್ಯಾಲಯ ಮಟ್ಟದಲ್ಲಿ ಆಂತರಿಕ ಸಮಿತಿಯೊಂದನ್ನು ರಚಿಸಿ, ಅಧ್ಯಕ್ಷರನ್ನಾಗಿ ಶ್ರೀ.ಶಂಕರರೆಡ್ಡಿ ಸಿಂಡಿಕೇಟ್ ಸದಸ್ಯರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು, ಸದಸ್ಯರಾಗಿ ಡಾ.ಪವಾರ ಡೀನರು ವಿದ್ಯಾರ್ಥಿ ಕಲ್ಯಾಣಾಧಿಕಾರಿಗಳು (DSW) ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಹಾಗೂ ಡಾ.ಮಹಾಬಲೇಶ್ವರ (DSW) ದಾವಣಗೆರಿ ವಿಶ್ವವಿದ್ಯಾಲಯ ಇವರುಗಳು ವಿಶ್ವವಿದ್ಯಾಲಯದ ಪುರುಷ ಮತ್ತು ಮಹಿಳಾ ವಿದ್ಯಾರ್ಥಿ ವಸತಿ ನಿಲಯಗಳಲ್ಲಿ ಸುಮಾರು 450 ರಿಂದ 500 ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಅವಶ್ಯಕತೆ ಇರುವಂತಹ ಪೀಠೋಪಕರಣಗಳ ಪಟ್ಟಿಯನ್ನು ಹಾಗೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ವರದಿಯನ್ನು ನೀಡಿರುತ್ತಾರೆ.

ಮುಂದುವರೆದು, 250 ಎಕರೆ ವಿಸ್ತಾರವುಳ್ಳ ವಿಶ್ವವಿದ್ಯಾಲಯದ ಆವರಣದಲ್ಲಿ, ಆಡಳಿತ ಕಟ್ಟಡ, ಶೈಕ್ಷಣಿಕ ವಿಭಾಗ, ವಸತಿ ನಿಲಯಗಳು, ಗ್ರಂಥಾಲಯ, ಪರೀಕ್ಷಾ ವಿಭಾಗ ಹಾಗೂ ವಿಶ್ವವಿದ್ಯಾಲಯದ 250 ಎಕರೆ ವಿಸ್ತಾರತೆ ಹೊಂದಿರುವ ಕಾರಣದಿಂದ ಬೇಕಾಗುವಂತಹ ಸಿಸಿಟಿವಿಗಳನ್ನು ಅಳವಡಿಸಲು ಬೇಕಾಗುವ ಸಿಸಿಟಿವಿ ಕ್ಯಾಮೆರಾ ಸಂಖ್ಯೆ, ಸಿಸಿಟಿವಿ ಕ್ಯಾಮೆರಾ ಗುಣಮಟ್ಟ, Specifications, ವಾರೆಂಟಿ, ಗ್ಯಾರೆಂಟಿ, ಇದಕ್ಕೆ ಬೇಕಾಗುವ ಸಿವಿಲ್ ಕಾಮಗಾರಿ, ಸಿಸಿಟಿವಿ ಕಂಟ್ರೋಲ್ ರೂಮ್, ಇಂಟರ್ ನೆಟ್ ಕನೆಕ್ಟಿವೀಟಿ, ಲ್ಯಾನ್ ಹಾಗೂ ಇನ್ನೂಳಿದ ಅವಶ್ಯಕತೆ ಇರುವ ವಸ್ತುಗಳ ಖರೀದಿಗೆ ವಿಶ್ವವಿದ್ಯಾಲಯವು ವಿಶ್ವವಿದ್ಯಾಲಯದ ಇಂಜೀನಿಯರ್‌ರವರಿಂದ ದೃಢೀಕರಣಗೊಂಡ ಡಿಪಿಆರ್ ತಯಾರಿಸಿ ನೀಡಿರುತ್ತಾರೆ.

ದಿನಾಂಕ: 20.09.2022 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಈ ಎರಡು ವರದಿಗಳನ್ನು ಮಂಡಿಸಿ, ಕುಲಂಕೂಷವಾಗಿ ಚರ್ಚಿಸಿ, ಅನುಮೋಧಿಸಲಾಗಿದ್ದು. ಮುಂದುವರೆದು, ವಿಶ್ವವಿದ್ಯಾಲಯಕ್ಕೆ ಬಿಡುಗಡೆಯಾಗಿರುವ ಒಟ್ಟು ಅನುದಾನ ರೂ. 20,08,60,000=00 (ಇಪ್ಪತ್ತು ಕೋಟಿ ಎಂಟು ಲಕ್ಷದ ಅರವತ್ತು ಸಾವಿರ ರೂಗಳನ್ನು) ಕೆಟಿಪಿಪಿ ಕಾಯ್ದೆ ಅನುಸಾರ ಟೆಂಡರ್ ಮುಖಾಂತರ/GEM ಪೋರ್ಟಲ್ ಮುಖಾಂತರ ಖರೀದಿಸಲು ಸಭೆಯಲ್ಲಿ ನಿರ್ಣಯಿಸಿ, ಅನುಮೋದನೆ ನೀಡಿರುತ್ತದೆ ಎಂದು ಕುಲಸಚಿವರು ತಿಳಿಸಿದರು. ಮುಂದುವರೆದು ಮೈಕ್ರೋ ಪ್ರಾಜೆಕ್ಟ್‌ನಲ್ಲಿ ವಿಶ್ವವಿದ್ಯಾಲಯಕ್ಕೆ ಬಿಡುಗಡೆಯಾದ 1 ಕೋಟಿ ರೂಗಳನ್ನು PWD ಮುಖಾಂತರ ಅನುಷ್ಠಾನಗೊಳಿಸಲು, ಸರ್ಕಾರ ತೀರ್ಮಾನಿಸಿರುತ್ತದೆ, ಎಂದು ಕುಲಸಚಿವರು ಸಭೆಗೆ ತಿಳಿಸಿದರು.

ರಾಯಚೂರು ವಿಶ್ವವಿದ್ಯಾಲಯವು ಆಂತರಿಕ ಸಮಿತಿ ನೀಡಿರುವ ವರದಿ ಅನುಸಾರ ಪೀಠೋಪಕರಣಗಳು, ಸಿಸಿಟಿವಿಗಳನ್ನು ನಿಯಮನುಸಾರ GEM ಪೋರ್ಟಲ್ ಮುಖಾಂತರ ಖರೀದಿ ಮಾಡಿರುತ್ತದೆ.

1. ಪೀಠೋಪಕರಣಗಳ ಒಟ್ಟು ಖರೀದಿಯನ್ನು ಕೆಟಿಪಿಪಿ ಕಾಯ್ದೆಯಲ್ಲಿ ಒದಗಿಸಿರುವ ಅವಕಾಶದಂತೆ ಕೇಂದ್ರ ಸರ್ಕಾರದ GEM ಪೋರ್ಟಲ್ ಮುಂಖಾತರ ಖರೀದಿಸಲಾಗಿದ್ದು ಇದರ ಒಟ್ಟು ಬೆಲೆ 5,52,02,282 ರೂಗಳಾಗಿರುತ್ತದೆ. ವಿಶ್ವವಿದ್ಯಾಲಯಕ್ಕೆ ಸರಕುಗಳು ಮುಟ್ಟಿದ ನಂತರ GEM ನಿಯಮನುಸಾರ ಶೇಕಡ 80ರಷ್ಟು ನೀಡಲು ಅವಕಾಶವಿದ್ದು ವಿಶ್ವವಿದ್ಯಾಲಯವು ರೂ 4,23,77,499=00 ಗಳನ್ನು ಮುಂಗಡ ಹಣವನ್ನು ನಂದಿ ಎಂಟರ್‌ಪ್ರೈಸೆಸ್ ಇವರಿಗೆ ನೀಡಲಾಗಿರುತ್ತದೆ.
2. ಸಿಸಿಟಿವಿ ಇತರ ಉಪಕರಣಗಳ ಖರೀದಿಯನ್ನು GEM ಪೋರ್ಟಲ್ ಮುಖಾಂತರ ಖರೀದಿ ಮಾಡಲಾಗಿದ್ದು, ಇದರ ಒಟ್ಟು ಬೆಲೆ 2,79,78,000=00 ರೂಗಳಾಗಿದ್ದು, ಹಾಗೂ ವಿಶ್ವವಿದ್ಯಾಲಯಕ್ಕೆ ಸರಕುಗಳು ಮುಟ್ಟಿದ ನಂತರ GEM ನಿಯಮನುಸಾರ ಶೇಕಡ 80ರಷ್ಟು ನೀಡಲು ಅವಕಾಶವಿದ್ದು ವಿಶ್ವವಿದ್ಯಾಲಯವು ರೂ. 1,29,68,667=00 ಗಳನ್ನು ಮಾತ್ರ ನಂದಿ ಎಂಟರ್‌ಪ್ರೈಸೆಸ್ ಇವರಿಗೆ ನೀಡಲಾಗಿರುತ್ತದೆ.

ಮುಂದುವರೆದು, ಕೆಕೆಆರ್‌ಡಿಬಿ ವಿಶ್ವವಿದ್ಯಾಲಯಕ್ಕೆ ಅನುಮೊದನೆಗೊಂಡ 9.85 ಕೋಟಿ ರೂಗಳಲ್ಲಿ ಮುಂಗಡವಾಗಿ ಶೇಕಡಾ 75 ರಷ್ಟು ಅಂದರೆ 7.38 ಕೋಟಿರೂಗಳು ವಿಶ್ವವಿದ್ಯಾಲಯದ ಖಾತೆಯಿಂದ ಬಿಡುಗಡೆ ಮಾಡಲಾಗಿರುತ್ತದೆ. ಇದರನಲ್ಲಿ ವಿಶ್ವವಿದ್ಯಾಲಯವು ಒಟ್ಟು 5,53,46,166 ರೂಗಳನ್ನು ನಿಯಮನುಸಾರ ಟೆಂಡರ್‌ದಾರರು ಪಡೆದಂತಹ GEM ಪೋರ್ಟಲ್ ಮುಖಾಂತರ ನಂದಿ ಎಂಟರ್‌ಪ್ರೈಸೆಸ್ ನೀಡಲಾಗುತ್ತದ. ಹಾಗೂ 7.38 ಕೋಟಿ ರೂಗಳಲ್ಲಿ ಉಳಿದ ಹಣ 1,84,53,834 ರೂಗಳು ವಿಶ್ವವಿದ್ಯಾಲಯದ ಖಾತೆಯಲ್ಲಿ ಉಳಿದಿರುತ್ತವೆ.

Advanced Artificial Intelligence Center of Excellence ಸ್ಥಾಪಿಸಲು ಕೆಕೆಆರ್‌ಡಿಬಿ ಮಂಡಳಿ ವತಿಯಿಂದ ಅನುಮೋಧನೆಗೊಂಡಿದ್ದ ಯೋಜನೆಯನ್ನು ವಿಶ್ವವಿದ್ಯಾಲಯವು ಕೆಟಿಪಿಪಿ ನಿಯಮಾನುಸಾರ ಟೆಂಡರ್ ಕರೆದು ಈ ಟೆಂಡರ್ ಕೇವಲ ಸಾರ್ವಜನಿಕ ವಲಯ ಸಂಸ್ಥೆಗಳು ಮಾತ್ರ ಭಾಗವಹಿಸಲು ಅವಕಾಶ ಮಾಡಿಕೊಟ್ಟು ಅತ್ಯುನ್ನತ

ಸಂಸ್ಥೆಗಳಿಗೆ ಮಾತ್ರ ಈ ಸೆಂಟರ್ ನಡೆಸಲು ಅವಕಾಶ ಮಾಡಿಕೊಡುವ ಉದ್ದೇಶದಿಂದ ವಿಶ್ವವಿದ್ಯಾಲಯವು ಟೆಂಡರ್ ಕರೆದು ಟೆಕ್ನಿಕಲ್ ಇವ್ಯಾಲ್ಯುವೇಶನ್ ಮಾಡಿ ಫೈನಾಶಿಯಲ್ ಬಿಡ್ ತೆರೆಯುವುದು ಮಾತ್ರ ಬಾಕಿ ಉಳಿದಿರುತ್ತದೆ. ಆದರೆ ಕೆಕೆಆರ್‌ಡಿಬಿ ಕಾರ್ಯದರ್ಶಿಗಳ ದಿನಾಂಕ 27.03.2023 ರ ಪತ್ರದ ಮುಖಾಂತರ ರಾಯಚೂರು ವಿಶ್ವವಿದ್ಯಾಲಯಕ್ಕೆ ಅನುಮೋದನೆಗೊಂಡಿದ್ದ (ಸಂಖ್ಯೆ:ಕಕಪ್ರಮಂ/ಯೋಶಾ/ಪ್ರುನಿ/01/2019-29 Vol-4/13898) Advanced Artificial Intelligence Center of Excellance ಸ್ಥಾಪಿಸಲು ನೀಡಿದ್ದ ಆದೇಶವನ್ನು ರದ್ದುಪಡಿಸಿರುವ ಬಗ್ಗೆ ತಿಳಿಸಿರುತ್ತದೆ.

ತದನಂತರ ನಡೆದ ಅನಪೇಕ್ಷಿತ ಬೆಳವಣಿಗೆಗಳಲ್ಲಿ, ರಾಯಚೂರು ವಿಶ್ವವಿದ್ಯಾಲಯವು ಸಿಸಿಟಿವಿಗಳ ಖರೀದಿಯಲ್ಲಿ ಅಕ್ರಮವೆಸಗಿದೆ ಎಂದು ವಿಶ್ವವಿದ್ಯಾಲಯದ ವಿರುದ್ಧ ಅಂದಿನ ಕೆಕೆಆರ್‌ಡಿಬಿ ಕಾರ್ಯದರ್ಶಿಗಳು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಆ ಜಿಲ್ಲಾಧಿಕಾರಿಗಳ ಸಮಿತಿಯು ವರದಿಯನ್ನು ತಯಾರಿಸಿ ವಿಶ್ವವಿದ್ಯಾಲಯವು ಮೇಲ್ನೋಟಕ್ಕೆ ಸಿಸಿಟಿವಿ ಖರೀದಿಯಲ್ಲಿ ಅಕ್ರಮವೆಸಗಿದೆ ಎಂದು ತಿಳಿಸಿ, ವಿಶ್ವವಿದ್ಯಾಲಯವು ಈ ವರದಿಗೆ 7 ದಿನಗಳಲ್ಲಿ ಸಮಂಜಸ ಉತ್ತರ ನೀಡಬೇಕು ಎಂದು ತಿಳಿಸಿರುತ್ತಾರೆ.

ವಿಶ್ವವಿದ್ಯಾಲಯವು ಈ ವರದಿಗೆ ಉತ್ತರವಾಗಿ ಸಿಂಡಿಕೇಟ್ ಸಭೆಯ ಅನುಮೋದನೆ (ದಿನಾಂಕ 29.09.2022), ಸಿಸಿಟಿವಿ ಖರೀದಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು, ನಿಯಮನುಸಾರ GEM ಪೋರ್ಟಲ್ ಮುಖಾಂತರ ಖರೀದಿಸಿದ ಎಲ್ಲಾ ದಾಖಲೆಗಳನ್ನು, ಅಪಾರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು ಇವರಿಗೆ ಸಲ್ಲಿಸಲಾಗಿರುತ್ತದೆ.

ಸಿಸಿಟಿವಿ ಖರೀದಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಸಮಿತಿಯು ವರದಿಗೆ ಉತ್ತರವಾಗಿ ವಿಶ್ವವಿದ್ಯಾಲಯವು ನೀಡಿರುವ ಸವಿಸ್ತಾರ ವರದಿಯನ್ನು ಮಾನ್ಯ ಘನ ಸರ್ಕಾರವು ಪರಿಶೀಲಿಸಿ, ದಿನಾಂಕ:10.01.2024, ಪತ್ರ ಸಂಖ್ಯೆ: ಒಇಡಿಎಸ್/131/ಹೆಚ್‌ಕೆಡಿ/2023 ಈ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ತನ್ನ ಅಭಿಪ್ರಾಯವನ್ನು ತಿಳಿಸಿ, ಆದೇಶಿಸಿರುತ್ತದೆ.

ಸದರಿ ಜಿಲ್ಲಾಧಿಕಾರಿಗಳ ವರದಿಯ ಅಂಶಗಳನ್ನು ಈ ಕೆಳಕಂಡಂತೆ ಪರಿಶೀಲಿಸಲಾಗಿದೆ.

1. ರಾಯಚೂರು ವಿಶ್ವವಿದ್ಯಾಲಯವು ತನ್ನ ಸಕ್ಷಮ ಪ್ರಾಧಿಕಾರವಾದ ಸಿಂಡಿಕೇಟ್ ಸಭೆಯಲ್ಲಿ ಸದರಿ ಯೋಜನೆಗೆ ತಾಂತ್ರಿಕ, ಆಡಳಿತಾತ್ಮಕ ಹಾಗೂ ಆರ್ಥಿಕ ಅನುಮೋದನೆಯನ್ನು ಪಡೆದಿರುತ್ತದೆ ಹಾಗೂ ಕೆಟಿಪಿಪಿ ಕಾಯ್ದೆಯ ಅನುಸಾರ ಯೋಜನೆಯನ್ನು ಅನುಷ್ಠಾನಗೊಳಿಸಲು ನಿರ್ಧರಿಸಿರುತ್ತದೆ.
2. ಟೆಂಡರ್‌ನಲ್ಲಿ ಅರ್ಹತೆ ಪಡೆದ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ.
3. ಸರ್ಕಾರದ ಅಧಿಕೃತ ಮಾರುಕಟ್ಟೆ ವ್ಯವಸ್ಥೆಯಾದ GEM ಮೂಲಕ ಖರೀದಿಸಲಾಗಿದ್ದು, ಸದರಿ ವಸ್ತುಗಳ ಬೆಲೆಯನ್ನು Amazon, Flipkart ಗಳಲ್ಲಿ ದೊರೆಯುವ ವಸ್ತುಗಳ ಬೆಲೆಗಳಿಗೆ ಹೋಲಿಕೆ ಮಾಡಿರುವುದು ಅಪ್ರಸ್ತುತವಾಗಿರುತ್ತದೆ.
4. ಖರೀದಿ ಮಾಡಿರುವ ವಸ್ತುಗಳ ದರ ಹಾಗೂ Installation, Maintenance ಮುಂತಾದವುಗಳನ್ನು ಒಳಗೊಂಡಿರುವುದರಿಂದ ದರವು ಹೆಚ್ಚಿಗೆ ಇರುವುದನ್ನು ಜಿಲ್ಲಾಧಿಕಾರಿಗಳು/ಮಂಡಳಿಯ ಕಾರ್ಯದರ್ಶಿಗಳು ಪರಿಗಣಿಸಿರುವುದಿಲ್ಲ.
5. Made in India ಸರಕುಗಳನ್ನು ಪೂರೈಸಲಾಗಿದೆ, ಚೀನಾ ಉತ್ಪಾದನಾ ವಸ್ತುಗಳನ್ನು ಹಿಂದಿರುಗಿಸಿರುವುದನ್ನು ಗಮನಿಸಿರುವುದಿಲ್ಲ.
6. GST ಅನ್ನು ನಿಯಮನುಸಾರ ಪಾವತಿಸಿರುವುದು.
7. ಟೆಂಡರ್ ನಿಯಮಗಳ ಪ್ರಕಾರ ಮೇ॥ ನಂದಿ ಎಂಟರ್ ಪ್ರೈಸಸ್ ಬೆಂಗಳೂರುರವರಿಗೆ ಕಾರ್ಯಾದೇಶ ನೀಡಲಾಗಿರುವುದನ್ನು ಸರ್ಕಾರ ದೃಢಪಡಿಸಿ ಕೊಂಡಿರುತ್ತದೆ.

ಈ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ ದುರುದ್ದೇಶ ಪೂರ್ವಕವಾಗಿ ನೀಡಿರುವ ವರದಿಯನ್ನು ಯೋಜನಾ ಇಲಾಖೆಯ ಕಾರ್ಯದರ್ಶಿಗಳ ಮೂಲಕ ಮಾನ್ಯ ಯೋಜನಾ ಸಚಿವರಿಗೆ ಅವಗಾಹನೆಗಾಗಿ ಸಲ್ಲಿಸಲಾಗಿತ್ತು. ಸದರಿ ವರದಿಯ ಕುರಿತು ಮಾನ್ಯ ಯೋಜನಾ ಸಚಿವರು ಈ ಕೆಳಕಂಡಂತೆ ಆದೇಶಿಸಿರುತ್ತಾರೆ.

ವಿಶ್ವವಿದ್ಯಾಲಯಗಳ ಉಪ ಕುಲಪತಿ ಹಾಗೂ ಸಿಂಡಿಕೇಟ್ ಮಂಡಳಿಗೆ ಪ್ರದತ್ತವಾದ ಅಧಿಕಾರವಿದ್ದು, ಅದರನ್ವಯ ಎಲ್ಲಾ ಜವಬ್ದಾರಿಯನ್ನು ವಿಶ್ವವಿದ್ಯಾಲಯವೇ ನಿರ್ವಹಿಸುವುದು, ಮುಂದುವರೆದು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು ನೇರವಾಗಿ ಅನುದಾನವನ್ನು ವಿಶ್ವವಿದ್ಯಾಲಯಕ್ಕೆ ಒದಗಿಸುವುದು ಹಾಗೂ ಹಣ ಬಳಕೆ

ಪ್ರಮಾಣ ಪತ್ರ (ಯುಸಿ) ಪಡೆಯುವಂತೆ ಆದೇಶಿಸಿರುತ್ತಾರೆ.

ಈ ಮೇಲ್ಕಂಡ ಆದೇಶದ ಹಿನ್ನಲೆಯಲ್ಲಿ ರಾಯಚೂರು ವಿಶ್ವವಿದ್ಯಾಲಯಕ್ಕೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮಂಜೂರಾಗಿರುವ ಕಾಮಗಾರಿಗಳಿಗೆ ಬಾಕಿ ಇರುವ ಅನುದಾನವನ್ನು ಬಿಡುಗಡೆ ಮಾಡುವಂತೆ ಹಾಗೂ ಕಾಮಗಾರಿಗಳು ಅನುಷ್ಠಾನಗೊಂಡ ನಂತರ ಹಣ ಬಳಕೆ ಪ್ರಮಾಣ ಪತ್ರವನ್ನು (ಯುಸಿ) ವಿಶ್ವವಿದ್ಯಾಲಯಯದಿಂದ ಪಡೆಯುವಂತೆ ತಮಗೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ. ರಾಯಚೂರು ವಿಶ್ವವಿಶ್ವವಿದ್ಯಾಲಯದ ಕುಲಪತಿಗಳು/ಕುಲಸಚಿವರು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮಂಜೂರಾಗಿರುವ ಕಾಮಗಾರಿಗಳನ್ನು ನಿಯಮನುಸಾರ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ಕೆಟಿಪಿಪಿ ನಿಯಮಗಳನ್ನು ಪಾಲಿಸಿ ನಿಯಮನುಸಾರ ಅನುಷ್ಠಾನಗೊಳಿಸುವಂತೆ ಸಹ ತಿಳಿಸಲಾಗಿದೆ.

ಈ ಸವಿಸ್ತಾರ ವರದಿಯನ್ನು ಕುಲಸಚಿವರು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದರು. ಸಿಂಡಕೇಟ್ ಸಭೆಯ ಈ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಚರ್ಚಿಸಿ ಕರ್ನಾಟಕ ವಿಶ್ವವಿದ್ಯಾಲಯದ ಅಧಿನಿಯಮ ೨೦೦೦ ಪ್ರಕಾರ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಕ್ಷಮ ಪ್ರಾಧಿಕಾರವಾಗಿದ್ದು ಅದರನುಸಾರ ವಿಶ್ವವಿದ್ಯಾಲಯವು ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದುಕೊಂಡು ನಿಯಮಾನುಸಾರ ಜಮ್ ಪೋಟ್ರಲ್ ಮುಖಾಂತರ ಖರೀದಿಸಿರುವುದನ್ನು ಕೆಕೆಆರಡಿಬಿ ಕಾರ್ಯದರ್ಶಿಗಳು ಖರೀದಿಯನ್ನು ಅಕ್ರಮವೆಂದು ತಿಳಿಸಿರುವುದು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯು ವಿಶಾದ ವ್ಯಕ್ತಪಡಿಸಿ ಸರ್ಕಾರ ನೀಡಿರುವ ವರದಿಯನ್ನು ಸ್ವಾಗತಿಸಿ ಕುಲಪತಿಗಳಿಗೆ ಮತ್ತು ಕುಲಸಚಿವರಿಗೆ ಸಿಂಡಿಕೇಟ್ ಸಭೆಯು ಆತ್ಮಸ್ತೈರ್ಯ ತುಂಬಿ ಈಗ ನಡೆಯುತ್ತಿರುವ ಉತ್ತಮ ಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗಲು ಸೂಚಿಸಿದರು.

ಮುಂದುವರೆದು ಸರ್ಕಾರದ ಪತ್ರ ದಿನಾಂಕ: 10.01.2024ರ ಪ್ರಕಾರ ಕುಲಸಚಿವರು ಮಂಡಿಸಿದ ಸವಿಸ್ತಾರ ವರದಿಯನ್ನು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಒಪ್ಪಿಕೊಂಡು ಕೆಕೆಆರ್‌ಡಿಬಿ ಮಂಡಳಿಗೆ ವಿಶ್ವವಿದ್ಯಾಲಯಕ್ಕೆ ನೀಡಿರುವ 9.85 ಕೋಟಿಗಳಲ್ಲಿ ಬಾಕಿ ಉಳಿದಿರುವ ಹಣವನ್ನು ಶೀಘ್ರದಲ್ಲಿ ವರ್ಗಾವಣೆ ಮಾಡಬೇಕೆಂದು ಪತ್ರ ಬರೆಯಬೇಕೆಂದು ಕುಲಸಚಿವರಿಗೆ ತಿಳಿಸಿದರು ಹಾಗೂ ನಿಯಮಾನುಸಾರ ಪಿಠೋಪಕರಣ ಪೂರೈಸಿರುವ ನಂದಿ ಎಂಟರ್‌ಪ್ರೈಸಸ್ ಇವರಿಗೆ ಬಾಕಿ ಮೊತ್ತವನ್ನು ಬಿಡುಗಡೆ ಮಾಡುವ ಸಂಬಂಧ ಈಗಾಗಲೇ ವಿಶ್ವವಿದ್ಯಾಲಯದ ನಿಯಮಾನುಸಾರ ಮೂರನೇ ಕಕ್ಷಗಾರರುಗಳಾದ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಿಭಾಗ, ಬಳ್ಳಾರಿ ಇವರುಗಳ ಮುಖಾಂತರ (third party inspection) ಪಿಠೋಪಕರಣ ಪರಿಶೀಲನೆ ಮಾಡಿ ಗುಣಮಟ್ಟದ ವರದಿಯನ್ನು ವಿಶ್ವವಿದ್ಯಾಲಯಕ್ಕೆ ದಿನಾಂಕ: 17.02.2024ರ ಪತ್ರದ ಮುಖಾಂತರ ನೀಡಲಾಗಿರುತ್ತದೆ. ಕಾರಣ ನಂದಿ ಎಂಟರ್‌ಪ್ರೈಸಸ್ ಇವರಿಗೆ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲು ಅನುಮೋದಿಸಿತು. ಸಿಸಿಟಿವಿ ಹಾಗೂ ಸೋಲಾರ ಕಾರ್ಯವನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕೆಂದು ತೀರ್ಮಾನಿಸಲಾಯಿತು.

ವಿಶ್ವವಿದ್ಯಾಲಯದಲ್ಲಿ Advanced Artificial Intelligence Center of Excellence ಸ್ಥಾಪಿಸುವ ಸಂಬಂಧ ಕೆಕೆಆರ್‌ಡಿಬಿ ಮಂಡಳಿಯಿಂದ ಅನುಮೋದನೆಗೊಂಡಿದ್ದ ಯೋಜನೆಯನ್ನು ಅದಕ್ಕೆ ಸಂಬಂಧಿಸಿದಂತೆ, ಕೆಟಿಪಿಪಿ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಟೆಕ್ನಿಕಲ್ ಇವ್ಯಾಲ್ಯುವೇಶನ್ ಪ್ರಕ್ರಿಯೆಯು ಮುಗಿದು ಫೈನಾಶಿಯಲ್ ಬಿಡ್ ತೆರೆಯಲಾಗಿರುತ್ತದೆ ಮತ್ತು ಕೇಂದ್ರ ಸರ್ಕಾರದ ಅಧೀನದ BECIL ಸಂಸ್ಥೆಯು ಎಲ್-೧ ಆಗಿರುತ್ತಾರೆ. ಈ ಸಂದರ್ಭದಲ್ಲಿ ಕೆಕೆಆರ್‌ಡಿಬಿ ಕಾರ್ಯದರ್ಶಿಗಳು ತಮ್ಮ ಪತ್ರ ದಿನಾಂಕ: 27.03.2023 ರ ಪತ್ರದ ಮುಖಾಂತರ ರಾಯಚೂರು ವಿಶ್ವವಿದ್ಯಾಲಯಕ್ಕೆ ಅನುಮೋದನೆಗೊಂಡಿದ್ದ (ಸಂಖ್ಯೆ:ಕಕಪ್ರಮಂ/ಯೋಶಾ/ಪ್ರುನಿ/01/2019-29Vol-4/13898) Advanced Artificial Intelligence Center of Excellence ಸ್ಥಾಪಿಸಲು ನೀಡಿದ್ದ ಆದೇಶವನ್ನು ರದ್ದುಪಡಿಸಿರುವುದರ ಕುರಿತು ಪತ್ರವನ್ನು ಬರೆದು ಮರಳಿ ಯೋಜನೆಯನ್ನು ಪಡೆಯುವ ಸಂಬಂಧ ಕ್ರಮ ವಹಿಸಬೇಕೆಂದು ತೀರ್ಮಾನಿಸಲಾಯಿತು.

ದಿನಾಂಕ 28.12.2023 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ರಾಯಚೂರು ವಿಶ್ವವಿದ್ಯಾಲಯದಲ್ಲಿ ಕಲ್ಯಾಣ ಕರ್ನಾಟಕ ಜಿನೋಮ್ ಅಧ್ಯಯನ ಸಂಸ್ಥೆ ಸ್ಥಾಪಿಸಲು, ತಜ್ಞರ ಸಮಿತಿ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಗಿತ್ತು. ಅದರಂತೆ ಮಾನ್ಯ ಕುಲಪತಿಗಳು ಈ ಕೆಳಕಂಡ ತಜ್ಞರ ಸಮಿತಿಯನ್ನು ರಚಿಸಿರುತ್ತಾರೆ.

| Sl. No. | Name and Details | Designation |
|---|---|---|
| 1. | **Prof. Harish Ramaswamy,**<br>Hon. Vice Chancellor,<br>Raichur Unicersity, Raichur.<br>Email-Id: vcraichuruniversity@gmail.com Mobile:9448379350 | Chairman |
| 2 | **Dr. K. Thangaraj,**<br>Former Director,<br>Centre for DNA Fingerprinting and Diagnosis (CDFD), Department of Biotechnology,<br>Government of India.<br>J C Bose Fellow Center for Cellular and Molecular Biology, CSIR-DST, Government of India.<br>Inner Ring Road, Uppal, Hyderabad- 500039, Telangana State Email: thangs@ccmb.res.in<br>Phone:+91 9908213822 | Member |
| 3 | **Dr.Pramod B. Gai**<br>Director,<br>Karnataka Institute for DNA Research (KIDNAR), Dharwad<br>Department of Higher Education,<br>Government of Karnataka.<br>Former Vice Chancellor<br>Karnatak University, Dharwad.<br>Mobile: +91-9591171725, 0836-2446274<br>Email:director@kidnar.ac.in,directorkidnar@gmail.com. | Member |
| 4 | **Prof.G. Sudhakar**<br>Head, Department of Human Genetics<br>Andhra University,<br>Visakhapatnam – 530003. AP<br>Phone: +91- 9440043433, 0891-2844725, 4724<br>Email:profgsudhakar@gmail.com,head.genetics@andhrauniversity.edu.in, | Member |
| 5 | **Er. Sankar Gowda Patil, M.Tech.**<br>Head of the Department<br>Department of Civil Engineering,<br>Sir M Visvesvaraya College of Engineering, Yeramarus Camp, Raichur - 584135.<br>Email:sgpatilsln@gmail.com<br>Mobile:9845980168 | Member |
| 6 | **The Secretary,**<br>Kalyana Karnataka Region Development Board, Ivan-e-Shahi Guest House,<br>Kalaburagi- 585102., Karnataka,<br>Email: hkadbgulb@gmail.com<br>Phone: 08472-256767<br>OR<br>**His Nominee** | Member |
| 7 | **Dr.SuyamindraKulkani**<br>Scientist, Karnataka Institute for DNA Research Dharwad<br>Dept of Higher Education Govt of Karnataka,<br>Mobile : +91-8217797551<br>Email: suyamindrask@gmail.com | Scientific Adviser |
| 8 | **The Registrar**<br>Raichur University, Raichur.<br>Email:registrarrur@gmail.com<br>Mobile: +91- 9880080243 | Member Secretary |

ತಜ್ಞರ ಸಮಿತಿಯು ದಿನಾಂಕ 06.01.2024 ರಂದು ಸಭೆ ಸೇರಿ ಡಿ.ಪಿ.ಆರ್. ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ ಹಾಗೂ ದಿನಾಂಕ 23.01.2024 ರ ಕೆಕೆಆರ್‌ಡಿಬಿ ಪತ್ರದಂತೆ 27.01.2024 ರಂದು ತಜ್ಞರ ಸಮಿತಿಯು ಸಭೆ ಸೇರಿ ಟೆಂಡರ್

| | | |
|---|---|---|
| | ಡಾಕ್ಯುಮೆಂಟ್ ತಯಾರಿಸಿ, 29.01.2024 ರಂದು ಜಿನೋಮ್ ಸಂಸ್ಥೆ ಸ್ಥಾಪಿಸಲು ಟೆಂಡರ್ ಕರೆದಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿ, ಅನುಮೋದಿಸಿತು. ಮುಂದುವರೆದು, ಈ ಯೋಜನೆಯು ಅತ್ಯಂತ ವೈಜ್ಞಾನಿಕತೆಯಿಂದ ಕೂಡಿರುವುದರಿಂದ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು, ಇದೇ ನಿಟ್ಟಿನಲ್ಲಿ ಸುಮಾರು ಎರಡು ದಶಕಗಳಿಂದ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಸರ್ಕಾರದ, ಕರ್ನಾಟಕ DNA ಸಂಶೋಧನಾ ಸಂಸ್ಥೆ ಧಾರವಾಡ, ಈ ಸಂಸ್ಥೆಗೆ ಈ ಯೋಜನೆಯ ಪ್ರೊಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್‌ಟೆನ್ಸಿ (PMC) ನೀಡಲು ತಜ್ಞರ ಸಮಿತಿಯು ಶಿಫಾರಸ್ಸು ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. | |
| 11 | ರಾಯಚೂರು ವಿಶ್ವವಿದ್ಯಾಲಯಕ್ಕೆ ಸಂಬಂದಿಸಿದ ಕಾನೂನು ವ್ಯಾಜ್ಯಗಳನ್ನು ನ್ಯಾಯಾಲಯಗಳಲ್ಲಿ ವಿಶ್ವವಿದ್ಯಾಲಯದ ಪರವಾಗಿ ಪ್ರತಿನಿಧಿಸಲು ಎಂಪ್ಯಾನಲ್‌ಮೆಂಟ್ ಮಾಡಿಕೊಂಡ ವಕೀಲರಿಗೆ ಮತ್ತು ಕಾನೂನು ಸಲಹೆಗಾರರಿಗೆ ವಕೀಲರ ಶುಲ್ಕವನ್ನು ಪ್ರತಿ ತಿಂಗಳಿಗೆ ಅಥವಾ ಪ್ರತಿ ಪ್ರಕರಣಕ್ಕೆ ಅಥವಾ ಪ್ರತಿ ಹಾಜರಾತಿಗೆ ಅಥವಾ ಇತರೆ ಶುಲ್ಕ ಪಾವತಿಸುವ ಕುರಿತು ಚರ್ಚೆ. | |
| | ರಾಯಚೂರು ವಿಶ್ವವಿದ್ಯಾಲಯದ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿ ಮೊಕದ್ದಮೆ ಹೂಡಿರುವ ಪ್ರಕರಣಗಳನ್ನು ವಿಶ್ವವಿದ್ಯಾಲಯದ ಲೀಗಲ್ ಸೆಲ್ ಮುಖಾಂತರ ಎಂಪ್ಯಾನಲ್‌ಮೆಂಟ್‌ಗೊಂಡಂತ ನ್ಯಾಯವಾದಿಗಳು/ವಕೀಲರು ವಿಶ್ವವಿದ್ಯಾಲಯದ ಪರವಾಗಿ ಜವಾಬ್ದಾರಿತನದಿಂದ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆ ಎಂದು ಕುಲಸಚಿವರು ಸಭೆಗೆ ತಿಳಿಸಿದರು. ಇಲ್ಲಿಯವರೆಗೆ ಕರ್ನಾಟಕ ಉಚ್ಚ ನ್ಯಾಯಾಲಯ ಗುಲ್ಬರ್ಗಾ ಪೀಠದಲ್ಲಿ 2 ಮೊಕದ್ದಮೆಗಳು ದಾಖಲಾಗಿದ್ದು, ಈ ಮೊಕದ್ದಮೆಗಳು ಸ್ನಾತಕೋತ್ತರ ಸಂಯೋಜನೆಗೆ ಸಂಬಂಧಪಟ್ಟಂತಹ ಕೇಸ್‌ಗಳಾಗಿರುತ್ತವೆ.<br>ವಿಶ್ವವಿದ್ಯಾಲಯದ ಪರವಾಗಿ ಶ್ರೀ.ಮಹಾಂತೇಶ ಪಾಟೀಲ ಇವರು ವಿಶ್ವವಿದ್ಯಾಲಯದ ಪರವಾಗಿ ವಾದ ಮಂಡಿಸಿರುತ್ತಾರೆ. ಈಗ ಕೇವಲ ಒಂದು ಮೊಕದ್ದಮೆ ಮಾತ್ರ ಹೈಕೋರ್ಟ್ ಗುಲ್ಬರ್ಗಾ ಪೀಠದಲ್ಲಿ ಬಾಕಿ ಉಳಿದಿರುತ್ತದೆ. ರಾಯಚೂರು ವಿಶ್ವವಿದ್ಯಾಲಯದ ವಿರುದ್ಧ ಮತ್ಯಾವುದೇ ಪ್ರಕರಣಗಳು ಯಾವುದೇ ನ್ಯಾಯಾಲಯದಲ್ಲಿ ದಾಖಲಾಗಿರುವುದಿಲ್ಲ ಎಂದು ಕುಲಸಚಿವರು ಸಭೆಗೆ ತಿಳಿಸಿದರು.<br>ಮುಂದುವರೆದು, ಈ ಪ್ರಕರಣಗಳನ್ನು ನಡೆಸುತ್ತಿರುವ ವಿಶ್ವವಿದ್ಯಾಲಯದ ವಕೀಲರುಗಳಿಗೆ ಶುಲ್ಕ ನೀಡುವ ಕುರಿತು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ಬೇರೆ ಬೇರೆ ವಿಶ್ವವಿದ್ಯಾಲಯದಲ್ಲಿ ವಕೀಲರುಗಳಿಗೆ ನೀಡುತ್ತಿರುವ ಶುಲ್ಕವನ್ನು ಸಂಗ್ರಹಿಸಿ, ಸದ್ಯದ ಪರಿಸ್ಥಿತಿಗೆ ಅನುಗುಣವಾಗಿ ಕುಲಪತಿಗಳು ಶುಲ್ಕ ನಿಗದಿಪಡಿಸಬಹುದು ಎಂದು ತೀರ್ಮಾನಿಸಿ, ಆ ನಿಗದಿಪಡಿಸಿದ ಶುಲ್ಕವನ್ನು ಮುಂದಿನ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು.<br>ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಾಗಿ ಶ್ರೀ.ಕೇಶವಾಚಾರ್ಯ ವಕೀಲರು, ರಾಯಚೂರು ಇವರನ್ನು ಪರಿಗಣಿಸಬೇಕು ಎಂದು ಕುಲಪತಿಗಳು ಸಭೆಗೆ ಮಂಡಿಸಿದರು. ಇದಕ್ಕೆ ಸಭೆಯು ಶ್ರೀ.ಕೇಶವಾಚಾರ್ಯ ಅವರನ್ನು ವಕೀಲರು/ಕಾನೂನು ಸಲಹೆಗಾರರಾಗಿ ಎಂಪ್ಯಾನಲ್‌ಮೆಂಟ್ ಮಾಡಲು ಅನುಮತಿ ಸೂಚಿಸಿ, ಅಮೋದಿಸಿದರು. | |
| | 2021-22 ನೇ ಸಾಲಿನಿಂದ ವಿವಿಧ B.A/B.Com./B.Sc ಸ್ನಾತಕ ಪ್ರೊಗ್ರಾಮ್‌ಗಳಿಗೆ ಆ ಶೈಕ್ಷಣಿಕ ವರ್ಷಕ್ಕೆ ಮಾತ್ರ ಸೀಮಿತವಾಗಿ 20% of Existing intake and not exceeding 20 ಹೆಚ್ಚುವರಿ ಪ್ರವೇಶಕ್ಕೆ ರೂ.10,000/- ಆಗುತ್ತದೆ. ಆದರೆ ಹೆಚ್ಚುವರಿ division (B.A & B.Com ಗೆ-60 ಮತ್ತು B.Sc-45 ಪ್ರವೇಶ ಪ್ರತಿ ವರ್ಗಕ್ಕೆ) ಮಂಜೂರು ಮಾಡಲು ರೂ.20,000/- ನಿಗದಿ ಆಗಿರುತ್ತದೆ. ಸದರಿ ಶುಲ್ಕಗಳನ್ನು ಹೆಚ್ಚಿಸುವ ಕುರಿತು ಚರ್ಚೆ. | ವಿಶ್ವವಿದ್ಯಾಲಯದ ವಿವಿಧ ಸ್ನಾತಕ ಪದವಿಗೆ Existing intake ಪ್ರವೇಶಗಳಿಗಿಂತ ಹೆಚ್ಚುವರಿಯಾಗಿ 20% ಸೀಟ್‌ಗಳನ್ನು ಪಡೆಯಲು ಮಾತ್ರ ಅವಕಾಶವಿದ್ದು, ಈ ಹೆಚ್ಚುವರಿ ಪ್ರವೇಶಕ್ಕೆ 10,000 ರೂ ಶುಲ್ಕ ನಿಗದಿಪಡಿಸಲಾಗಿದ್ದು ಹಾಗೂ ಪ್ರತಿ ವಿದ್ಯಾರ್ಥಿಗೆ 1000 ರೂ. ಶುಲ್ಕ ನಿಗದಿ ಮಾಡಲಾಗಿರುತ್ತದೆ ಎಂದು ಕುಲಸಚಿವರು ಸಭೆಗೆ ತಿಳಿಸಿದರು.<br>ಮುಂದುವರೆದು, ವಿವಿಧ ಸ್ನಾತಕೋತ್ತರ ಕೋರ್ಸ್‌ಗಳಿಗೆ ಒಂದು ಹೆಚ್ಚುವರಿ ವರ್ಗ (division) B.A & B.Com ಗೆ ಪ್ರವೇಶ ಮಿತಿ 60 ವಿದ್ಯಾರ್ಥಿಗಳು ಹಾಗೂ B.Sc ಕೋರ್ಸ್‌ಗೆ 45 ವಿದ್ಯಾರ್ಥಿಗಳು ಈ ಹೆಚ್ಚುವರಿ ವರ್ಗಕ್ಕೆ ಮಂಜೂರು ಮಾಡಲು ವಿಶ್ವವಿದ್ಯಾಲಯದಿಂದ 20 ಸಾವಿರ ಶುಲ್ಕ ನಿಗದಿಯಾಗಿರುತ್ತದೆ. ವಿಶ್ವವಿದ್ಯಾಲಯ ಗುರುತಿಸಿದಂತೆ ಕಾಲೇಜುಗಳಿಂದ ಬಂದ ಬೇಡಿಕೆಗಳನ್ನು ಪರಿಶೀಲಿಸಿದಾಗ ವಿಶ್ವವಿದ್ಯಾಲಯದ ಗಮನಕ್ಕೆ ಬಂದಿರುವುದೇನೆಂದರೆ ಕೆಲ ಕಾಲೇಜುಗಳು 20% |

| | | |
|---|---|---|
| | | ಹೆಚ್ಚುವರಿ ಸೀಟ್‌ಗಳನ್ನು ಕೇಳದೆ ಒಂದು ಹೆಚ್ಚುವರಿ ವರ್ಗವನ್ನೇ ಕೇಳುತ್ತಿದ್ದು, ಈ ವರ್ಗ ನೀಡುವಿಕೆಯಿಂದ 60 ವಿದ್ಯಾರ್ಥಿಗಳು ಕೇವಲ 20 ಸಾವಿರರೂಗಳನ್ನು ವಿಶ್ವವಿದ್ಯಾಲಯಕ್ಕೆ ತುಂಬಿ ಪಡೆದುಕೊಂಡಿರುವುದು ಕಂಡು ಬಂದಿರುತ್ತದೆ. ಹಾಗಾಗಿ ಯಾವುದೇ ಕಾಲೇಜಿಗೆ ಒಂದು ಹೆಚ್ಚುವರಿ ವರ್ಗ ನೀಡಬೇಕೆಂದು ಬರುವ ಅರ್ಜಿಗಳಿಗೆ 20 ಸಾವಿರರೂ. ನಿಗದಿಯಾಗಿರುವ ಶುಲ್ಕವನ್ನು 60 ಸಾವಿರ ಮಾಡಬೇಕೆಂದು ಕುಲಸಚಿವರು ತಿಳಿಸಿದರು.<br><br>ಈ ವಿಷಯದ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಒಂದು ಹೆಚ್ಚುವರಿ ವರ್ಗಕ್ಕೆ 60 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದುಕೊಳ್ಳುವ ಅನುಕೂಲವಿರುವುದರಿಂದ ಪ್ರತಿ ವಿದ್ಯಾರ್ಥಿಗೆ 1 ಸಾವಿರ ರೂಗಳಂತೆ ನೋಡಿದಲ್ಲಿ ಹೆಚ್ಚುವರಿ ವರ್ಗಕ್ಕೆ ಈಗಿರುವ 20 ಸಾವಿರ ಶುಲ್ಕದ ಬದಲು 60 ಸಾವಿರ ಶುಲ್ಕವನ್ನು ನಿಗದಿ ಮಾಡಲು ಸಭೆಯಲ್ಲಿ ನಿರ್ಧರಿಸಿ, ಅನುಮೋದಿಸಲಾಯಿತು.<br><br>ಮುಂದುವರೆದು, ಶೈಕ್ಷಣಿಕ ಗುಣಮಟ್ಟವನ್ನು ಗಮನದಲ್ಲಿರಿಸಿ ಒಂದು ಹೆಚ್ಚುವರಿ ವರ್ಗವನ್ನು ವಿಶ್ವವಿದ್ಯಾಲಯದ ನಿಯಮನುಸಾರ ಮಂಜೂರು ಮಾಡಿದಲ್ಲಿ ಅದೇ ಸ್ನಾತಕ ಕೋರ್ಸ್‌ಗೆ ಮುಂದಿನ ಮೂರು ವರ್ಷಗಳ ಕಾಲ ಹೆಚ್ಚುವರಿ ವರ್ಗವನ್ನು ನೀಡಬಾರದೆಂದು ಎಂಬ ಷರತ್ತಿನೊಂದಿಗೆ ಆ ಸಂಸ್ಥೆ/ಕಾಲೇಜಿಗೆ ಮಂಜೂರಾತಿ ನೀಡಬಹುದೆಂದು ತೀರ್ಮಾನಿಸಿ, ಅನುಮೋದಿಸಲಾಯಿತು. |
| 13. | ರಾಯಚೂರು ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗಕ್ಕೆ ಗೌಪ್ಯತೆ ವಿಭಾಗ (Confidential Section) ವನ್ನು ಮಾಡುವ ಕುರಿತು. | ಕುಲಸಚಿವರು ಮೌಲ್ಯಮಾಪನ, ಇವರು ಪರೀಕ್ಷಾ ವಿಭಾಗವನ್ನು ಪ್ರತ್ಯೇಕವಾಗಿ ಗೌಪ್ಯತೆ ವಿಭಾಗವಾಗಿ (Confidential Section) ನಿರ್ವಹಿಸಬೇಕೆಂದು ಸಭೆಯಲ್ಲಿ ಮಂಡಿಸಿದರು. ಗೌಪ್ಯತೆ ವಿಭಾಗದಿಂದ ಪರೀಕ್ಷಾ ಕಾರ್ಯಗಳು ಸುಗಮವಾಗಿ ಜರುಗಿಸಲು ಹಾಗೂ ಅತ್ಯಂತ ಸೂಕ್ಷ್ಮತೆ ಹಾಗೂ ಗೌಪ್ಯತೆಯಿಂದ ಇಡಬೇಕಾದ ಪರೀಕ್ಷೆಗೆ ಸಂಬಂಧಪಟ್ಟ ಕಡತಗಳು, ಪ್ರಶ್ನೆ ಪತ್ರಿಕೆಗೆ ಸಂಬಂಧಪಟ್ಟ ಕಡತಗಳನ್ನು ನಿರ್ವಹಿಸಲು ಈ ವಿಭಾಗವು ಅತ್ಯಂತ ಅವಶ್ಯಕವಾಗಿರುತ್ತದೆ ಇದರ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ಕುಲಪತಿಗಳು, ಕುಲಸಚಿವರು ಮೌಲ್ಯಮಾಪನ ಇವರ ಮೂಲಕ ಗೌಪ್ಯತೆ ವಿಭಾಗವನ್ನು ಪ್ರತ್ಯೇಕವಾಗಿ ನಿರ್ಮಿಸಲು ಡಿಪಿಆರ್ ಪಡೆದು ಕೆಟಿಪಿಪಿ ನಿಯಮನುಸಾರ ಟೆಂಡರ್ ಕರೆದು, ಅದಕ್ಕೆ ತಗಲುವ ವೆಚ್ಚವನ್ನು ಪರೀಕ್ಷಾ ವಿಭಾಗದಿಂದ ಸಂಗ್ರಹಗೊಂಡ ಖಾತೆಯಿಂದ ಭರಿಸಬೇಕೆಂದು ನಿರ್ಧರಿಸಿ ಅನುಮೋದಿಸಲಾಯಿತು. |
| 14. | ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳ | |

| | | |
|---|---|---|
| | ಚರ್ಚೆ. | |
| 1. | ವಿಶ್ವವಿದ್ಯಾಲಯದಲ್ಲಿರುವ ಹಳೆಯ ಮತ್ತು ನಿರುಪಯುಕ್ತ ವಸ್ತುಗಳಾದ ಬ್ಯಾಟರೀಸ್, ಕಂಪ್ಯೂಟರ್ಸ, ಕುರ್ಚಿ, ಟೇಬಲ್‌ಗಳು, ಅಲ್ಮಾರಗಳು, ಹರೆದುಹೋದ ಪುಸ್ತಕ ಮತ್ತು ಹಳೆಯ ರದ್ದಿ ಪೇಪರ್‌ಗಳು ಮತ್ತು ಇತರೆ ಸಾಮಗ್ರಿಗಳನ್ನು ಗುಜರಿಗೆ/ಹರಾಜಿಗೆ ಹಾಕಲು ಸಮಿತಿ ರಚಿಸುವ ಕುರಿತು. | 1992-93 ರ ಸಾಲಿನಿಂದ ಗುಲ್ಬರ್ಗಾ ವಿಶ್ವವಿದ್ಯಾಲಯದ ರಾಯಚೂರು ಪಿ.ಜಿ.ಸೆಂಟರಾಗಿ ಗುರುತಿಸಿಕೊಂಡಿದ್ದು ನಿರುಪಯುಕ್ತ ವಸ್ತುಗಳಿದ್ದು, ಈ ವಸ್ತುಗಳನ್ನು ಗುರುತಿಸಿ, ಹರಾಜು ಹಾಕಲು, ಡೆಡ್‌ಸ್ಟಾಕ್/ರಿಜಿಸ್ಟರ್ ಮಾಡಿ, ಹರಾಜು ಪ್ರಕ್ರಿಯೆ ಮಾಡಲು ಸಮಿತಿಯನ್ನು ರಚಿಸಬೇಕೆಂದು ಕುಲಸಚಿವರು ಸಭೆಗೆ ಮಂಡಿಸಿದರು. ಇದರನ್ವಯ ಸಮಿತಿಯನ್ನು ಈ ಕೆಳಗಿನಂತೆ ರಚಿಸಲಾಗಿರುತ್ತದೆ.<br>1. ಅಧ್ಯಕ್ಷರಾಗಿ, · ಶ್ರೀ.ಶಿವಬಸಪ್ಪ ಮಾಲಿ ಪಾಟೀಲ್ ಸಿಂಡಿಕೇಟ್ ಸದಸ್ಯರು, ರಾಯಚೂರು ವಿಶ್ವವಿದ್ಯಾಲಯ ರಾಯಚೂರು.<br>2. ಸದಸ್ಯರಾಗಿ, ಪ್ರೊ.ಭಾಸ್ಕರ್ ಕಲಾ ಮತ್ತು ವಾಣಿಜ್ಯ ನಿಕಾಯದ ಡೀನ, ರಾಯಚೂರು ವಿಶ್ವವಿದ್ಯಾಲಯ ರಾಯಚೂರು.<br>3. ಸದಸ್ಯರಾಗಿ, ಪ್ರೊ.ಪಾರ್ವತಿ ಸಿ.ಎಸ್ ವಿಜ್ಞಾನ, ಉಪಕರಣಾತ್ಮಕ ತಂತ್ರಜ್ಞಾನ ನಿಕಾಯದ ಡೀನ್ ರಾಯಚೂರು ವಿಶ್ವವಿದ್ಯಾಲಯ ರಾಯಚೂರು.<br>4. ಶ್ರೀ.ಪಂಪಾಪತಿ, ಸಹಾಯಕ ಅಭಿಯಂತರರು, ರಾಯಚೂರು ವಿಶ್ವವಿದ್ಯಾಲಯ ರಾಯಚೂರು.<br>5. ಶ್ರೀ.ಮೋಹನ ಶೀಘ್ರಲಿಪಿಗಾರ, ರಾಯಚೂರು ವಿಶ್ವವಿದ್ಯಾಲಯ ರಾಯಚೂರು.<br>6. ದೇವೆಂದ್ರ ಪೂಜಾರಿ ಎಲೆಕ್ಟ್ರಿಕಲ್ ವೈರ್‌ಮೆನ್, ರಾಯಚೂರು ವಿಶ್ವವಿದ್ಯಾಲಯ ರಾಯಚೂರು.<br>7. ಸಂಯೋಜಕರು, ಡಾ.ಜಿ.ಎಸ್.ಬಿರಾದಾರ ಗ್ರಂಥಪಾಲಕರು, ರಾಯಚೂರು ವಿಶ್ವವಿದ್ಯಾಲಯ ರಾಯಚೂರು.<br>ಈ ಮೇಲ್ಕಂಡ ಸಮಿತಿಯು ಈ ಕಾರ್ಯವನ್ನು ನಿರ್ವಹಿಸಲು 30 ದಿನಗಳಲ್ಲಿ ವಿಶ್ವವಿದ್ಯಾಲಯಕ್ಕೆ ವರದಿ ಸಲ್ಲಿಸಲು ತೀರ್ಮಾನಿಸಿ, ಅನುಮೋದಿಸಲಾಯಿತು. |
| 2. | ಸೈಕೊಮೆಟ್ರಿಕ್ ಟೆಸ್ಟ್‌ನ್ನು ರಾಯಚೂರು ವಿಶ್ವವಿದ್ಯಾಲಯ ಹಾಗೂ ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳಿಗೆ ನಡೆಸುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸೈಕೊಮೆಟ್ರಿಕ್ ಟೆಸ್ಟ್ ನಡೆಸುವ ಬಗ್ಗೆ ಮಾನ್ಯ ಕುಲಪತಿಗಳು ಸಭೆಗೆ ಮಂಡಿಸಿದರು. ರಾಯಚೂರು ವಿಶ್ವವಿದ್ಯಾಲಯಕ್ಕೆ ಬೆಂಗಳೂರಿನ ಸ್ವಯಂ ಅನಾಲಿಟಿಕ್ಸ್ ಸಂಸ್ಥೆಯು ವಿದ್ಯಾರ್ಥಿಗಳಿಗೆ ತಮ್ಮ ಸ್ಪರ್ಧಾತ್ಮಕ ಸ್ಥಾನವನ್ನು ತಿಳಿದುಕೊಂಡು ಹೆಚ್ಚಿಸಿಕೊಳ್ಳಲು ಕೆಲವೊಂದು ಪ್ರಶ್ನಾವಳಿ ಮುಖಾಂತರ ವಿದ್ಯಾರ್ಥಿಗಳನ್ನು ಪರಿಶೀಲಿಸಿ, ವಿದ್ಯಾರ್ಥಿಗಳು ಮಾನಸಿಕವಾಗಿ ಯಾವ ಸ್ಥಾನದಲ್ಲಿದ್ದಾರೆಂದು ಗುರುತಿಸಿ, ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಜಗತ್ತಿನಲ್ಲಿ ತಮ್ಮ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸಲು ಅನುಕೂಲ ಮಾಡಿಕೊಡಲು ಈ ಸೈಕೊಮೆಟ್ರಿಕ್ ಟೆಸ್ಟ್‌ನ್ನು ಮಾಡಲು ವಿಶ್ವವಿದ್ಯಾಲಯಕ್ಕೆ |

| | | |
|---|---|---|
| | | ಮನವಿ ಮಾಡಿರುತ್ತಾರೆ. ಮುಂದುವರೆದು, ಈ ಪರೀಕ್ಷೆ ನಡೆಸಲು ಪ್ರತಿ ವಿದ್ಯಾರ್ಥಿಗೆ 100 ರೂ. ವೆಚ್ಚ ತಗಲಬಹುದೆಂದು ಕುಲಸಚಿವರು ಸಭೆಗೆ ತಿಳಿಸಿದರು. ಸಭೆ ಈ ವಿಚಾರವನ್ನು ಕುಲಂಕೂಷವಾಗಿ . ಚರ್ಚಿಸಿ, ಕುಲಸಚಿವರಿಗೆ ವಿಶ್ವವಿದ್ಯಾಲಯದ ಶುಲ್ಕಗಳಲ್ಲಿ ಒಂದಾದ ಕೆರಿಯರ್ ಗೈಡೆನ್ಸ್ ಫೀ ಮುಖಾಂತರ ಎಷ್ಟು ಶುಲ್ಕ ನಿಗದಿಪಡಿಸಿದೆ ಎಂದು ಪ್ರಶ್ನಿಸಿದರು. ಇದಕ್ಕೆ ಕುಲಸಚಿವರು ಪ್ರತಿ ವಿದ್ಯಾರ್ಥಿಯಿಂದ 50ರೂಗಳನ್ನು ನಿಗದಿಪಡಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ಹಾಗೂ ಈ ಕೆರಿಯರ್ ಗೈಡೆನ್ಸ್ ಫೀ ಶುಲ್ಕದಿಂದ ಸಂಗ್ರಹಗೊಂಡ ಹಣದಿಂದ ವಿದ್ಯಾರ್ಥಿಗಳಿಗೆ ಕೆರಿಯರ್ ಗೈಡೆನ್ಸ್ ಫೀ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನು ನಡೆಸಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸದರು. ಮುಂದುವರೆದು ಈ ಸೈಕೊಮೆಟ್ರಿಕ್ ಟೆಸ್ಟ್‌ನ್ನು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಅಥವಾ ಅಕಾಡೆಮಿಕ್ ಸೆಂಟರ್ಸ್‌ಗಳಲ್ಲಿ ಈ ತರದ ಪರೀಕ್ಷೆಗಳನ್ನು ನಡೆಸಿರುತ್ತಾರೋ ಇಲ್ಲವೋ ಎಂಬುದನ್ನು ಪರಿಶೀಲಿಸಿ, ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಈ ವಿಷಯವನ್ನು ಪರಿಶೀಲಿಸಬಹುದಾಗಿ ತೀರ್ಮಾನಿಸಲಾಯಿತು. |
| 3. | ರಾಯಚೂರು ವಿಶ್ವವಿದ್ಯಾಲಯದ 2023-24ನೇ ಶೈಕ್ಷಣಿಕ ಸಾಲಿನ ವಿವಿಧ ಅಧ್ಯಯನ ವಿಭಾಗಗಳಿಗೆ ಪಠ್ಯಕ್ರಮ ರಚಿಸಲು ಅಧ್ಯಯನ ಮಂಡಳಿ (BOS) ಸಭೆಗೆ ಆಹ್ವಾನಿತ ವಿಷಯ ಪರಿಣಿತರಿಗೆ ಪ್ರಯಾಣ ಭತ್ಯೆ ಮತ್ತು ಆಸನ ಭತ್ಯೆ ನಿರ್ಧರಿಸುವ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯದ 2023-24ನೇ ಶೈಕ್ಷಣಿಕ ಸಾಲಿನ ವಿವಿಧ ಅಧ್ಯಯನ ವಿಭಾಗಗಳಿಗೆ ಪಠ್ಯಕ್ರಮ ರಚಿಸಲು ಅಧ್ಯಯನ ಮಂಡಳಿ (BOS) ಸಭೆಗೆ ಆಹ್ವಾನಿತ ವಿಷಯ ಪರಿಣಿತರಿಗೆ ಪ್ರಯಾಣ ಭತ್ಯೆಯನ್ನು ಪ್ರತಿ ಕಿ.ಮೀ.ಗೆ ರೂ.6/-ರಂತೆ ಪಾವತಿಸುವುದು ಮತ್ತು ಆಸನ ಭತ್ಯೆಯನ್ನು ರೂ.750/-ರಂತೆ ಪಾವತಿಸಬಹುದೆಂದು ನಿರ್ಧರಿಸಿ, ಸಭೆಯ ಸರ್ವ ಸದಸ್ಯರು ಈ ವಿಷಯದ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಅಂಗೀಕರಿಸಿ, ಅನುಮೋದಿಸಿದರು. |
| 4. | ರಾಯಚೂರು ವಿಶ್ವವಿದ್ಯಾಲಯದಲ್ಲಿ 2023-24ನೇ ಶೈಕ್ಷಣಿಕ ಸಾಲಿನ Monitary Cell ನಿಂದ ರಚಿಸಿ BE.d ಕೋರ್ಸ್‌ನ ಎಲ್ಲಾ ಕಾರ್ಯಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ BE.d ಕೋರ್ಸ್‌ನ ಎಲ್ಲಾ ಕಾರ್ಯಚಟುವಟಿಕೆಗಳ ಬಗ್ಗೆ ಕುಲಸಚಿವರು (ಮೌಲ್ಯಮಾಪನ) ಇವರು ಸಭೆಗೆ ಮಂಡಿಸಿ, BE.d ಕೋರ್ಸ್‌ನ ಕಾರ್ಯಕ್ರಮ ಅತ್ಯಂತ ವೃತ್ತಿಪರತೆ ಹಾಗೂ ಕ್ಷಮತೆಯಿಂದ ನಿರ್ವಹಿಸಲು Monitary Cellನ್ನು ರಚಿಸಿ, ಈ Cell ಮುಖಾಂತರ BE.d ಕಾರ್ಯಕ್ರಮದ ಗುಣಮಟ್ಟ, ವೃತ್ತಿಪರತೆ ಕಾಪಾಡಿಕೊಂಡು ಹೋಗಲು ಹಾಗೂ BE.d ಕೋರ್ಸ್‌ಗೆ ಸಂಬಂಧಪಟ್ಟ ಇನ್ನಿತರ ಚಟುವಟಿಕೆಗಳಿಗೆ ನಿರ್ದೇಶನವನ್ನು ಈ Cell ಮುಖಾಂತರ ನಿರ್ದೇಶನವನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಿ, ಕುಲಸಚಿವರು (ಮೌಲ್ಯಮಾಪನ) ಇವರು ಈ Monitary Cell ಸದಸ್ಯರ ಹೆಸರುಗಳನ್ನು ಕುಲಪತಿಗಳ ಅನುಮೋದನೆ ಪಡೆದು, ರಚಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಿ, ಅನುಮೋದಿಸಲಾಯಿತು. |
| | ರಾಯಚೂರು ವಿಶ್ವದ್ಯಾಲಯದಲ್ಲಿ ಕೈಗೊಂಡ ಸಿವಿಲ್ ಕಾಮಗಾರಿಗಳ ವೆಚ್ಚಗಳ ಅನುಮೋದನೆ ಕುರಿತು. | |

5. ರಾಯಚೂರು ವಿಶ್ವವಿದ್ಯಾಲಯದ ಅವಶ್ಯಕತೆಗನುಗುಣವಾಗಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕುಲಸಚಿವರು ಸಭೆಯಲ್ಲಿ ಮಂಡಿಸಿದರು. ಸಿಂಡಿಕೇಟ್ ಸಭೆಯು ಈ ಎಲ್ಲಾ ಸಿವಿಲ್ ಕಾಮಗಾರಿಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಕೆಟಿಪಿಪಿ ನಿಯಮನುಸಾರ ಕ್ಯಾಷಿಯೋ ಟೆಕ್ ನಿರ್ಮಿತಿ ಸಂಸ್ಥೆ ಶಕ್ತಿನಗರ ಇವರ ಮುಖಾಂತರ ಈ ಕಾಮಗಾರಿಗಳನ್ನು ನೆರವೇರಿಸಲು ಅನುಮೋದಿಸಿ, ಇದಕ್ಕೆ ತಗಲುವ ಅಂದಾಜು ವೆಚ್ಚವಾದ 95.20 ಲಕ್ಷರೂಗಳನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸಲು ತೀರ್ಮಾನಿಸಿ, ಅನುಮೋದಿಸಲಾಯಿತು.

| Sl No | Name of the work | Estimate Cost(in lakhs) |
|---|---|---|
| 01 | Construction of Examination Center Building G I Roofing | 30.85 |
| 02 | Strenthening Work to Academic Block (G+I), Chemistry Lab and Auditorium Hall | 13.50 |
| 03 | Aluminium Windows Works to Girls Hostel (GF) | 7.50 |
| 04 | Painting Work At Academic Block Old Building | 12.25 |
| 05 | (a)Drainage Repair and Construction Septic Tank Works At Academic Block & Admin Block<br>(b) Construction Parapet wall at Academic Block (2 floor)<br>(c) Construction of Head Room and railing Work at Admin Block<br>(d) Covering to Open Sky (Fabrication work at Admin Block) and Steps SS Railing | 31.10 |
| | Total Rs | 95.20 |

(ಪ್ರೊ.ವಿಶ್ವನಾಥ ಎಂ.)
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.

(ಪ್ರೊ.ಹರೀಶ್ ರಾಮಸ್ವಾಮಿ)
ಕುಲಪತಿಗಳು ಹಾಗೂ ಅಧ್ಯಕ್ಷರು,
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.